ಕನ್ನಡ, ಕರ್ನಾಟಕ ಏನು ಮಾಡಬೇಕು ?

ಡಾ. ಪಾಟೀಲ ಪುಟ್ಟಪ್ಪ

ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ.

ಪ್ರಕಾಶಕರ ನುಡಿ

ಕನ್ನಡ ಕರ್ನಾಟಕ, ಈಗ ಏನು ಮಾಡಬೇಕು?

ಕನ್ನಡ ನಾಡು, ನುಡಿಯ ಕಾಳಜಿ ಇರುವ ಪ್ರಜ್ಞಾವಂತ ಕನ್ನಡಿಗರೆಲ್ಲ ಕೇಳಿಕೊಳ್ಳುವ ಜ್ವಲಂತ ಪ್ರಶ್ನೆ ಇದಾಗಿದೆ.

ಶತಮಾನದ ಇತಿಹಾಸ ಹೊಂದಿರುವ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ ಕನ್ನಡಿಗರೆಲ್ಲ ಅಭಿಮಾನ ಪಡುವ ಸಾಂಸ್ಕೃತಿಕ ಸಂಸ್ಥೆಯೆನಿಸಿದೆ. ಕರ್ನಾಟಕ ಏಕೀಕರಣ ಅದರ ಕನಸಾಗಿತ್ತು. ಅದು ನನಸಾಗಿದೆ. ಕರ್ನಾಟಕದ ಸಾಂಸ್ಕೃತಿಕ ಪುನರುತ್ಥಾನಕ್ಕೆ ಅದು ತನ್ನದೇ ಆದ ರೀತಿಯಲ್ಲಿ ಸೇವೆ ಸಲ್ಲಿಸುತ್ತ ಬಂದಿದೆ. ಅದೆಲ್ಲ ತಮಗೆ ತಿಳಿದ ವಿಷಯ.

ಕರ್ನಾಟಕ ಏಕೀಕರಣವಾಗಿ ವಿಶಾಲ ಮೈಸೂರೆನಿಸಿ ಕೊನೆಗೂ ಕರ್ನಾಟಕವೆಂಬ ಹೆಸರು ಪಡೆಯುವಷ್ಟರಲ್ಲಿ ಕನ್ನಡ ಕರ್ನಾಟಕದ ಪ್ರಾಮಾಣಿಕ ಹಿತಚಿಂತಕರಿಗೆಲ್ಲ ಸಾಕು ಬೇಕಾಯಿತು. ಈ ನಡುವೆ ನಾವು ಕಳೆದು ಕೊಂಡುದುದೆಷ್ಟೋ? ಉಳಿಸಿಕೊಂಡುದುದೆಷ್ಟೋ? ನಾಡು, ನುಡಿಯ ಹಿತಾಸಕ್ತಿಗೆ ಧಕ್ಕೆ ಬಂದಾಗಲೆಲ್ಲ ಕರ್ನಾಟಕ ವಿದ್ಯಾವರ್ಧಕ ಸಂಘ ಗರ್ಜಿಸಿದೆ. ಮುಂಚೂಣಿಯಲ್ಲಿ ನಿಂತು ಹೋರಾಟ ಮಾಡಿ ನ್ಯಾಯವನ್ನು ದಕ್ಕಿಸಿಕೊಟ್ಟಿದೆ ಎಂಬ ಮಾತೂ ಅಷ್ಟೇ ಸತ್ಯವಾಗಿದೆ.

ಕನ್ನಡ ನಾಡಿನ ಏಕೀಕರಣವಾಗಿ ನಾಲ್ಕು ದಶಕಗಳೇ ಕಳೆಯುತ್ತ ಬಂದರೂ ನಮ್ಮ ಆಡಳಿತ ನಡೆಸಿದ ಸರ್ಕಾರಗಳು ಕನ್ನಡ ಭಾಷೆ, ಜನಾಂಗ, ಸಂಸ್ಕೃತಿ ಸಂರಕ್ಷಣೆ, ಗಡಿ ಭದ್ರತೆ ವಿಷಯದಲ್ಲಿ ಬಿಗಿ ನೀತಿ ಅನುಸರಿಸುವಲ್ಲಿ ಎಡಹುತ್ತ, ಮುಗ್ಗರಿಸುತ್ತ ಬಂದಿವೆ. ಈ ನಮ್ಮ ಪ್ರಕಟಣೆ, ಒಂದು ಸಕಾಲಿಕ ಮಾರ್ಗದರ್ಶಿ, ಕನ್ನಡಿಗರಿಗೆ ಇದೊಂದು ಸಕಾಲಿಕ ಎಚ್ಚರಿಕೆಯ ಗಂಟೆ.

ಈ ಕಿರು ಹೊತ್ತಿಗೆಯಲ್ಲಿ ಕನ್ನಡ, ಕರ್ನಾಟಕದ ಹಿತಾಸಕ್ತಿಗೆ ಸಂಬಂಧ ಪಟ್ಟ ಹಾಗೆ ಎಂಟು ಕಿರು ಲೇಖನಗಳಿವೆ. ಲೇಖಕರು, ನಮ್ಮ ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ಕಳೆದ ಸುಮಾರು ಮೂರು ದಶಕಗಳಿಂದ ಅಧ್ಯಕ್ಷರಾಗಿ, ಸಂಘವನ್ನು ಮುನ್ನಡೆಸುತ್ತ ಪ್ರಗತಿ ಪಥದಲ್ಲಿ ತಂದವರು. ಕನ್ನಡ ನಾಡಿನ ಪತ್ರಿಕಾ ಪ್ರಪಂಚದಲ್ಲಿ ಅರ್ಧ ಶತಮಾನದ ದಾಪುಗಾಲು ಹಾಕಿದವರು. ಪ್ರಪಂಚದ ಪಾಪುವೆಂದೇ ಹೆಸರಾದವರು!

ಕನ್ನಡ, ಕರ್ನಾಟಕದ ಸಮಗ್ರ ಚಿತ್ರವನ್ನು ಕಣ್ಣಿಗೆ ಕಟ್ಟುವಂತೆ ಶಬ್ದ ಚಿತ್ರದಲ್ಲಿ ಬಿಡಿಸಬೇಕಿದ್ದರೆ ಅದಕ್ಕೆ ಪಾಪುವೇ ಬೇಕು. ಕನ್ನಡ ಕಾವಲು ಸಮಿತಿಯ ಅಧ್ಯಕ್ಷರಾಗಿ ಪಾಪು ಮಾಡಿದ ಕೆಲಸ ಒಂದು ಕಾಲಕ್ಕೆ ನೆರೆ ರಾಜ್ಯದವರ ಕಣ್ಣು ಕುಕ್ಕಿಸಿತ್ತು ಎಂಬ ಜೀವಂತ

ನಿರ್ದಶನವೇ ಸಾಕು. ಬೇರೆ ಮಾತು ಬೇಕಿಲ್ಲ.

ಇದೋ ಈ ಕಿರು ಹೊತ್ತಿಗೆ ನಮ್ಮ ಸಂಘದ ಹೆಮ್ಮೆಯ ಪ್ರಕಟನಯಾಗಿ ನಿಮ್ಮ ಕೈಯಲ್ಲಿದೆ. ನಿಮ್ಮನ್ನು ನೀವು ಗುರುತಿಸಿಕೊಂಡು ಸೂಕ್ತವಾದ ಮತ್ತು ಸಕಾಲಿಕವಾದ ಕ್ರಿಯಾಶೀಲ ಚಟುವಟಿಕೆ ಕೈಕೊಂಡು ಸರಕಾರದ ಮೇಲೆ ಒತ್ತಡ ತರಬೇಕು. ಈ ನಾಡು ನುಡಿಯ ಹಿತಾಸಕ್ತಿ ಕಾಯ್ದುಕೊಂಡರೆ ಸಂಘದ ಶ್ರಮ ಸಾರ್ಥಕವೆಂಬ ಭಾವನೆ ನಮ್ಮದಾಗಿದೆ.

ರಕ್ಷಿಸು ಕರ್ನಾಟಕದೇವಿ, ಸಂರಕ್ಷಿಸು

ಕರ್ನಾಟಕ ದೇವಿ ಎಂಬ ಶಾಂತಕವಿಗಳ

ಪ್ರಾರ್ಥನೆಯೊಂದಿಗೆ ನಮ್ಮ ಮಾತು ಮುಗಿಸುತ್ತಿದ್ದೇವೆ.

೨೪.೭.೧೯೯೫
ಧಾರವಾಡ

ಕಾರ್ಯಕಾರೀ ಸಮಿತಿಯ ಸದಸ್ಯರು
ಕರ್ನಾಟಕ ವಿದ್ಯಾವರ್ಧಕ ಸಂಘ
ಧಾರವಾಡ

ಪದಾಧಿಕಾರಿಗಳು

ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

ಡಾ. ಪಾಟೀಲ ಪುಟ್ಟಪ್ಪ	ಅಧ್ಯಕ್ಷರು
ಶ್ರೀ ಎಚ್.ಸಿ. ಮೊಗಲಿ	ಕಾರ್ಯಾಧ್ಯಕ್ಷರು
ಶ್ರೀ ಎಸ್.ಎಮ್. ಹೊಳೆಯಣ್ಣವರ	ಕೋಶಾಧ್ಯಕ್ಷರು
ಶ್ರೀ ಸಿದ್ಧಲಿಂಗ ದೇಸಾಯಿ	ಪ್ರಧಾನ ಕಾರ್ಯದರ್ಶಿ
ಡಾ. ಶಿವಾನಂದ ಗಾಳಿ	ಸಹ ಕಾರ್ಯದರ್ಶಿ

ಶ್ರೀಮತಿ ಹೇಮಾ ಪಟ್ಟಣ ಶೆಟ್ಟಿ, ಪ್ರೊ. ಬಿ.ವ್ಹಿ. ಗುಂಜೆಟ್ಟಿ, ಡಾ. ಸೋಮಶೇಖರ
ಇಮ್ರಾಪೂರ, ಶ್ರೀ ಶಿವಪ್ಪ ರಾಮಪ್ಪ ಕಾರಡಗಿ, ಶ್ರೀ ಸುದರ್ಶನ ದೇಸಾಯಿ,
ಪ್ರೊ. ಎಸ್.ಸಿ. ಹಿರೇಮಠ, ಡಾ. ಆರ್.ಸಿ. ಅಗಡಿ,
ಶ್ರೀಮತಿ ಜಯಶ್ರೀ ಶೇಷರಾಜ ಗುತ್ತಲ,
ಪ್ರೊ. ಸಿ.ಪಿ. ಹೇಮಗಿರಿಮಠ
ಕಾರ್ಯಕಾರಿ ಸಮಿತಿ ಸದಸ್ಯರು.

ಪರಿವಿಡಿ

೧. ಕರ್ನಾಟಕ ಒಂದಾಗಿ ಉಳಿದೀತೆ ?

ಕನ್ನಡಿಗರು ಅನೇಕ ದಶಕಗಳಿಂದ ಕರ್ನಾಟಕದ ಕನಸನ್ನು ಕಾಣುತ್ತಿದ್ದರು. ಕರ್ನಾಟಕ ಆಗಬೇಕಾದರೆ ಅವರು ಬಹಳಷ್ಟು ಪ್ರಯಾಸ ಪಟ್ಟರು. ಅವರಿಗೆ ಒಳಗಿನ ವಿರೋಧ ಹಾಗೂ ಹೊರಗಿನ ಪ್ರತಿರೋಧ ಎರಡೂ ಇದ್ದವು.

ಮೈಸೂರಿನವರು ತಮ್ಮ ಪ್ರತ್ಯೇಕತೆ ಕಳೆದು ಹೋದೀತೆಂದು ಹೆದರಿಕೊಂಡಿದ್ದರು. ಅಲ್ಲಿ ಜವಾಬ್ದಾರಿ ಸರ್ಕಾರ ಬಂದು ಮೈಸೂರಿನ ನಾಯಕರು ಅಧಿಕಾರದ ರುಚಿಯನ್ನು ಸವಿಯತೊಡಗಿದ್ದರು. ಜವಾಬ್ದಾರಿ ಸರ್ಕಾರ ಬರುವುದಕ್ಕೆ ಮೊದಲು ಅವರಲ್ಲಿ ಕರ್ನಾಟಕ ಆಗಬೇಕೆನ್ನುವ ಆತುರ ಇದ್ದಿತು. ಜವಾಬ್ದಾರಿ ಸರ್ಕಾರ ಬಂದ ಕೂಡಲೇ ಅವರಲ್ಲಿ ಆ ಆತುರ ಅಳಿದು ತಮಗೆ ತಮ್ಮ ಮೈಸೂರೇ ಸಾಕು ಎನ್ನುವ ಭಾವನೆ ಬೆಳೆದು ಕೊಂಡಿತು.

ಅತ್ತ ಕೊಡಗಿನಲ್ಲಿ, ಕೊಡವ ಜನರ ವೈಶಿಷ್ಟ್ಯ, ದೊಡ್ಡ ಕರ್ನಾಟಕದಲ್ಲಿ ಅಳಿದು ಹೋಗಬಹುದೆನ್ನುವ ಅಂಜಿಕೆ ಕಾಣಿಸಿಕೊಂಡಿದ್ದಿತು. ಹಾಗೇನೂ ಆಗಲಾರದೆಂದು ಹೇಳಿ, ಆಗ ಅವರನ್ನು, ಕರ್ನಾಟಕದಲ್ಲಿ ಸೇರಿಸಿ ಕೊಳ್ಳಬೇಕೆನ್ನುವ ವಿಚಾರಕ್ಕೆ ಒಪ್ಪಿಸಬೇಕಾದರೆ ಸಾಕು ಬೇಕಾಗಿ ಹೋಯಿತು.

ಅಂದು ಮೈಸೂರಿನಲ್ಲಿ ಶ್ರೀ ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿ ಆಗಿದ್ದರು. ಅವರಿಗೆ ಕರ್ನಾಟಕ ಆಗುವುದೂ ಬೇಕಾಗಿದ್ದಿತು. ಮುಖ್ಯಮಂತ್ರಿ ಪದ ಉಳಿಯಬೇಕೆನ್ನುವ ಆಸೆಯೂ ಇದ್ದಿತು. ಆದರೆ ಮೈಸೂರು ಒಂದು ಸರ್ಕಾರವಾಗಿ, ಕರ್ನಾಟಕ ರಾಜ್ಯ ಆಗಬೇಕೆನ್ನುವ ವಿಚಾರಕ್ಕೆ ಬದ್ಧವಾಗಿ ನಿಲ್ಲದೇ ಹೋಯಿತು. ಇನ್ನುಳಿದ ಕನ್ನಡ ಪ್ರದೇಶಗಳೊಂದಿಗೆ ಸೇರಿಕೊಂಡು ತಾನು ಕರ್ನಾಟಕ ಆಗುವುದಾದರೆ, ಅದರಿಂದ ತನಗೆ ಆಗುವ ಪ್ರಯೋಜನಗಳ ಪರಿಶೀಲನೆ ನಡೆಸಲು, ಮೈಸೂರು, ಶೇಷಾದ್ರಿ ಸಮಿತಿಯನ್ನು ನೇಮಿಸಿತು. ಕರ್ನಾಟಕದ ಸಾಂಸ್ಕೃತಿಕ ಏಕೀಕರಣ ಆಗಬೇಕೆನ್ನುವ ವಿಚಾರ ಅವರ ಮನಸ್ಸಿನಲ್ಲಿ ಇರಲೇ ಇಲ್ಲ. ಅವರು ಲಾಭ ಹಾನಿಯ ಲೆಕ್ಕಾಚಾರ ಮಾಡ ತೊಡಗಿದ್ದರು.

ಹೊರಗಿನ ಭಾರತ ಸರ್ಕಾರದಲ್ಲಿ ಅನೇಕ ಜನ, ವಿಶೇಷತಃ ಪ್ರಧಾನ ಮಂತ್ರಿ ಜವಾಹರಲಾಲ ನೆಹರು, ಭಾಷಾನ್ವಯ ರಾಜ್ಯಗಳ ಬಗೆಗೆ ಪ್ರತಿರೋಧ ಭಾವನೆಯನ್ನು ಇರಿಸಿಕೊಂಡಿದ್ದರು.

ಮೈಸೂರಿನ ಹೊರಗಿನ ಜನ ಶ್ರೀ ಎಸ್. ನಿಜಲಿಂಗಪ್ಪನವರು ಅಧ್ಯಕ್ಷರಾಗಿದ್ದ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ನೇತೃತ್ವದಲ್ಲಿ ಮೈಸೂರಿನ ಮನವೊಲಿಸುವ ಮತ್ತು ಕೇಂದ್ರದ ಪ್ರತಿರೋಧವನ್ನು ನಿವಾರಿಸುವ ಪ್ರಯತ್ನವನ್ನು ಬಹು ಸಮರ್ಪಕವಾಗಿ ನಿರ್ವಹಿಸಿಕೊಂಡು ಬಂದರು.

ಹುಬ್ಬಳ್ಳಿಯಲ್ಲಿ ಶ್ರೀ ಅದರಗುಂಚಿ ಶಂಕರಗೌಡರು ಕರ್ನಾಟಕ ಏಕೀಕರಣ

ಆಗಬೇಕೆಂದು ಒತ್ತಾಯಿಸಿ ಆಮರಣ ಉಪವಾಸ ಕೈಗೊಂಡರು. ಮೂರು ವಾರಗಳ ಅವರ ಉಪವಾಸ ಬಹಳಷ್ಟು ಪರಿಣಾಮವನ್ನುಂಟು ಮಾಡಿತು.

ಶ್ರೀ ಕೆಂಗಲ್‌ರು, ತಮ್ಮ ಮುಖ್ಯಮಂತ್ರಿ ಪದವನ್ನು, ಕರ್ನಾಟಕಕ್ಕೆ ಇಂತಿವೆಲ್ಲಾ ಪ್ರದೇಶಗಳು ಬರಬೇಕೆಂದು ಒತ್ತಾಯಿಸಲು ಉಪಯೋಗಿಸಿದ್ದರೆ, ಕರ್ನಾಟಕಕ್ಕೆ ಕಾಸರಗೋಡು, ನೀಲಗಿರಿ, ತಾಳವಾಡಿ, ಮಡಕಸಿರಾ ಮೊದಲಾದ ಪ್ರದೇಶಗಳು ಕಳೆದು ಹೋಗುತ್ತಿರಲಿಲ್ಲ. ಜತ್ತ, ಅಕ್ಕಲಕೋಟೆ ಹಾಗೂ ದಕ್ಷಿಣ ಸೊಲ್ಲಾಪುರಗಳ ಕನ್ನಡಿಗರು ಹೊರ ರಾಜ್ಯದಲ್ಲಿ ಉಳಿದು ತೊಳಲಾಟ ಪಡುವ ಪರಿಸ್ಥಿತಿ ತಪ್ಪುತ್ತಿತ್ತು.

ಕನ್ನಡ ಜನ ನಾವೆಲ್ಲರೂ ಬಂಧುರವಾಗಿ ಉಳಿಯಬೇಕು. ಒಂದುಗೂಡಿ ಅಭಿವೃದ್ಧಿ ಪಡೆಯಬೇಕು ಎನ್ನುವ ಉದ್ದೇಶದಿಂದಲೇ ಕರ್ನಾಟಕ ರಾಜ್ಯವನ್ನು ಪಡೆದುಕೊಂಡಿದ್ದೇವೆ. ಒಂದು ರಾಜ್ಯವಾಗಿ ಒಡೆದು ಸಿಡಿದು ಬಿಡಿಯಾಗಿ ಹೋಗಬೇಕೆಂದು ನಾವು ಒಂದು ರಾಜ್ಯ ಆಗಲಿಲ್ಲ.

ಬೆಂಗಳೂರಿನಲ್ಲಿ ನಿಂತು ಸರ್ಕಾರವನ್ನು ನಿರ್ದೇಶಿಸುವ ಜನ ಕರ್ನಾಟಕ ಆದದ್ದೇಕೆ ಎನ್ನುವ ಮಾತನ್ನು ನೆನೆದು ಕೊಳ್ಳಬೇಕು. ಸರ್ಕಾರದಲ್ಲಿ ಇರುವವರು ಏನನ್ನು ಮಾಡಿದರೂ, ಅದು ರಾಜ್ಯದ ಬೆಸುಗೆಯನ್ನು ಬಲಪಡಿಸುವಂತೆ ಇರಬೇಕಲ್ಲದೆ, ಆ ಬೆಸುಗೆ ಶಿಥಿಲಗೊಂಡು ಹೋಗುವಂತೆ ಆಗಬಾರದು.

ಆದರೆ, ರಾಜ್ಯ ಸರ್ಕಾರದ ಆಡಳಿತಾಧಿಕಾರಿಗಳಿಗೆ ರಾಜ್ಯದ ಸಮಗ್ರ ದೃಷ್ಟಿ ಇಲ್ಲ. ರಾಜ್ಯ ಆಗಿ, ೪೦ ವರ್ಷಗಳೇ ಕಳೆದರೂ, ರಾಜ್ಯದ ಜನ ಹಾಗೂ ಪ್ರದೇಶಗಳ ಸಮೀಕರಣವು ಇನ್ನೂ ಮೃಗ ಜಲವಾಗಿ ಉಳಿದಿದೆ.

ವಿಧಾನ ಸೌಧದಲ್ಲಿ ಕುಳಿತು ಏನನ್ನು ಮಾಡಿದರೂ, ಅವರು ಮಾಡುವ ಪ್ರತಿಯೊಂದು ಕಾರ್ಯವೂ ರಾಜ್ಯದ ಏಕತೆ ಸಮಗ್ರತೆ ಕಾಯ್ದುಕೊಳ್ಳುವದಕ್ಕೆ ಪೂರಕವಾಗಿರಬೇಕು. ರಾಜ್ಯದ ಬೇರೆ ಬೇರೆ ಪ್ರದೇಶಗಳಲ್ಲಿ, ತಮ್ಮನ್ನು ಕೈ ಬಿಡಲಾಗಿದೆ ಎನ್ನುವ ಭಾವನೆ, ಜನರಲ್ಲಿ ದಿನೇ ದಿನೇ ಹೆಚ್ಚು ಹೆಚ್ಚು ಬಲವಾಗಿ ಬೆಳೆಯ ತೊಡಗಿದೆ. ಈ ಭಾವನೆಯನ್ನು ಜನರ ಮನಸ್ಸಿನಿಂದ ತೊಡೆದು ಹಾಕದಿದ್ದರೆ ಬಹಳಷ್ಟು ಆಸೆ, ಕನಸನ್ನು ಇರಿಸಿಕೊಂಡು ಪಡೆದುಕೊಂಡ ಈ ಕರ್ನಾಟಕ ನಮ್ಮ ಕಣ್ಣೆದುರಿನಲ್ಲಿಯೇ ಕಳೆದು ಹೋದೀತೆನ್ನುವ ಹೆದರಿಕೆ ನಮ್ಮೆಲ್ಲರಿಗೂ ಇದೆ.

ಕೊಡಗಿನಲ್ಲಿ ಈಗಾಗಲೇ ಒಡಕಿನ ಧ್ವನಿ ಎದ್ದಿದೆ. ಕೊಡಗಿನ ಅಸ್ತಿತ್ವವೇ ಕಳೆದು ಹೋಗುವಂತೆ, ಅಲ್ಲಿ ಹೊರಗಿನಿಂದ ಜನ ಬಂದು ತುಂಬಿದ್ದಾರೆ. ಅಲ್ಲಿಯ ಅರಣ್ಯವನ್ನು, ಮಲಿಯಾಳಿಗಳು ಅತಿಕ್ರಮಿಸಿದ್ದಾರೆ. ಅಕ್ರಮವಾಗಿ ಒತ್ತುವರಿ ಮಾಡಿರುವ ಈ ಅರಣ್ಯ ಭೂಮಿಯನ್ನು ಯಾರು ಒತ್ತುವರಿ ಮಾಡಿರುವರೋ ಅವರಿಗೇ ಅದನ್ನು ಸಕ್ರಮಗೊಳಿಸಿ ಕೊಡಬೇಕೆನ್ನುವ ನೀತಿಯನ್ನು ನಮ್ಮ ಸರ್ಕಾರ ಸ್ವೀಕರಿಸಿದೆ. ಈ ನೀತಿ ಕೊಡಗಿಗೆ ಮಾರಕವಾಗಿದೆ.

ಹೊರಗಿನ ದೆವ್ವ ಬಂದು ಮನೆಯ ದೆವ್ವವನ್ನು ಓಡಿಸಿತು ಎಂಬಂತೆ ಇಂದು ಕೊಡಗಿನ ಮೂಲ ನಿವಾಸಿಗಳ ಸ್ಥಿತಿ ಆಗಿದೆ. ಅವರು ಯಾವುದಕ್ಕೆ ಹೆದರಿ ಕೊಂಡಿದ್ದರೋ ಅದು ಅವರಿಗೆ

ಈಗ ಬಂದು ಬಡಿದುಕೊಂಡಿದೆ. ಅವರ ವೈಶಿಷ್ಟ್ಯ, ಅವರ ಅಸ್ತಿತ್ವ ಸಂಪೂರ್ಣ ಅಳಿದು ಹೋಗುವುದು ಕಲ್ಪನೆಯಾಗಿ ಉಳಿದಿಲ್ಲ. ವಾಸ್ತವ ಸತ್ಯವಾಗಿದೆ.

ರಾಜ್ಯ ಸರ್ಕಾರದ ತಾರತಮ್ಯ ಧೋರಣೆಯನ್ನು ಪ್ರತಿಭಟಿಸಿ, ಉತ್ತರ ಕರ್ನಾಟಕದಲ್ಲಿ, ಹೈದ್ರಾಬಾದ ಕರ್ನಾಟಕದಲ್ಲಿ ಬಂಡಾಯದ ಧ್ವನಿ ಎದ್ದಿದೆ. ಮುಧೋಳದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆದಾಗ ಪರಿಷತ್ತಿನ ಅಧ್ಯಕ್ಷ ಗೊ.ರು. ಚೆನ್ನಬಸಪ್ಪನವರು ಎರಡು ಕರ್ನಾಟಕದ ಒಡಕಿನ ಮಾತು ಬೇಡವೆಂದು ಹೇಳಿದರು. ಅವರು ಈ ಮಾತನ್ನು ತಪ್ಪು ಜನರೆದುರು ಹೇಳಿದರು. ರಾಜ್ಯದಲ್ಲಿ ಒಡಕಿನ ಧ್ವನಿ ಬರುವುದಕ್ಕೆ ರಾಜ್ಯ ಸರ್ಕಾರದ ಪಕ್ಷಪಾತವೆನಿಸುವ ನೀತಿಯೇ ಕಾರಣವಾಗಿದೆ. ತಾರತಮ್ಯ ಎಣಿಸುವುದು ನಿನ್ನೆ ಮಾತ್ರ ನಡೆಯಲಿಲ್ಲ. ಅದು ಈಗಲೂ ಮುಂದುವರಿದುಕೊಂಡು ನಡೆದಿದೆ.

ಶ್ರೀ ಬಂಗಾರಪ್ಪ ಹಾಗೂ ಶ್ರೀ ವೀರಪ್ಪ ಮೊಯಿಲಿ ಮುಖ್ಯಮಂತ್ರಿ ಆಗಿದ್ದಾಗ ರಾಜ್ಯದ ಎಲ್ಲಾ ಹತ್ತು ಪ್ರಾಧಿಕಾರ ಹಾಗೂ ಅಕಾಡೆಮಿಗಳಿಗೆ ಹಳೆಯ ಮೈಸೂರಿನವರೇ ಅಧ್ಯಕ್ಷರಾಗಿದ್ದರು. ಈಗ ಶ್ರೀ ದೇವೇಗೌಡರು ಮುಖ್ಯಮಂತ್ರಿ ಪದದ ಕಾಲಕ್ಕೆ ಒಂದು ಅಕಾಡೆಮಿ ಮಾತ್ರ ಮೈಸೂರಿನ ಹೊರಗಿನವರಿಗೊಬ್ಬರಿಗೆ ಬಂದಿದೆ. ಅದನ್ನಾದರೂ ಅವರಿಗೆ ಏಕೆ ಕೊಡಬೇಕಾಗಿದ್ದಿತು?

ಈ ರೀತಿಯ ಪಕ್ಷಪಾತವನ್ನು ಜನ ಎಲ್ಲಿಯವರೆಗೆ ಸಹಿಸಿಕೊಂಡು ಹೋಗುತ್ತಾರೆ? ರಾಜ್ಯದ ಸಮಗ್ರ ಸೌಕರ್ಯಗಳನ್ನು ಈ ರಾಜ್ಯದ ಎಲ್ಲ ಪ್ರದೇಶಗಳ ಜನರೂ ಸಮಾನವಾಗಿ ಹಂಚಿಕೊಳ್ಳಬೇಕು. ಇಲ್ಲದಿದ್ದರೆ, ರಾಜ್ಯದಲ್ಲಿ ಅಸಮಾಧಾನದ ಬೆಂಕಿ ಹತ್ತಿ ಭುಗಿಲೆನ್ನುತ್ತದೆ. ರಾಜ್ಯ ಆಳುವವರಿಗೆ ಈ ವಿಚಾರ ಅದೇಕೆ, ಹೇಗೆ ತಿಳಿಯುವುದಿಲ್ಲ ?

ಹಿಂದೆ, ಈ ಕನ್ನಡ ಪ್ರದೇಶಗಳು ಮುಂಬೈ, ಮದ್ರಾಸು ಹಾಗೂ ನಿಜಾಮ ಆಡಳಿತಗಳಲ್ಲಿ ನಿಷ್ಕಾಳಜಿಗೆ ಒಳಪಟ್ಟಿದ್ದವು. ಈಗಲೂ ಅದೇ ಧೋರಣೆ ಮುಂದುವರಿದುಕೊಂಡು ಹೋಗುವುದಾದರೆ, ಕರ್ನಾಟಕ ರಾಜ್ಯವಾಗಿಯೂ ಜನರಿಗೆ ಏನು ಪ್ರಯೋಜನ?

ಈ ಅಕಾಡೆಮಿ ಹಾಗೂ ಪ್ರಾಧಿಕಾರಗಳು ಒಂದು ನಿದರ್ಶನ ಮಾತ್ರ. ಇಂತಹ ನೂರಾರು ಅನ್ಯಾಯಗಳು ಜನರ ಮನಸ್ಸನ್ನು ಹಿಂಸಿಸತೊಡಗಿವೆ. ಈ ಅನ್ಯಾಯ ಹಾಗೂ ಪಕ್ಷಪಾತಗಳನ್ನು ಸರಿಪಡಿಸುವುದಕ್ಕೋಸುಗ ತೀವ್ರ ಕ್ರಮಗಳನ್ನು ಕೈಗೊಳ್ಳುವುದು ಅಗತ್ಯವಿದೆ. ವಿಲಂಬ ಮಾಡಿದರೆ ಅಮೃತ ಕೂಡ ವಿಷವಾಗಬಹುದು. ಈ ರಾಜ್ಯದಲ್ಲಿ ಯಾವ ಪ್ರದೇಶವೂ ಇನ್ನೊಂದು ಪ್ರದೇಶದ ವಸಾಹತು ಎಂದೆನಿಸಬಾರದು.

ಕರ್ನಾಟಕದ ಕನಸನ್ನು ಕಂಡು ಅದನ್ನು ನನಸನ್ನಾಗಿ ಮಾಡಲು ಹೋರಾಟ ಮಾಡಿಕೊಂಡು ಬಂದವರಿಗೆ ಈಗ ನಡೆದಿರುವದು ಒಂದು ದುಃಸ್ವಪ್ನ ಎಂಬಂತೆ ಕಾಣ ತೊಡಗಿದೆ. ಆಡಳಿತ ನಡೆಸುವವರಲ್ಲಿ ಸದ್ಬುದ್ಧಿ ಬಂದರೆ ಕರ್ನಾಟಕವು ಉಳಿಯುತ್ತದೆ, ಸುಂದರವಾಗಿ ಬೆಳೆಯುತ್ತದೆ.

೨. ಬೆಳಗಾವಿಃ ಏನು ಮಾಡಬೇಕು ?

ಮೂರು ತಿಂಗಳ ಹಿಂದೆ ನಾನು ಮುಖ್ಯಮಂತ್ರಿ ದೇವೇಗೌಡರನ್ನು ಭೆಟ್ಟಿ ಆಗಿದ್ದಾಗ ಬೆಳಗಾವಿಯ ವಿಷಯವನ್ನು ಕುರಿತು ಅವರೊಂದಿಗೆ ಚರ್ಚಿಸಿ, ಆ ಬಗೆಗೆ ತೀರ್ಮಾನ ಕೈಗೊಂಡು, ಬೆಳಗಾವಿ ಬಗೆಗೆ ಒಂದು ಪ್ರತ್ಯೇಕ ಸಭೆಯನ್ನು ಕರೆಯಬೇಕೆಂದು ಅವರನ್ನು ಕೇಳಿದ್ದೆ. ಆ ಸಭೆಯನ್ನು ಸರ್ಕಾರ ಕರೆಯುವುದೆಂದು ನಾನು ಜಾತಕ ಪಕ್ಷಿಯಂತೆ ನಿರೀಕ್ಷಿಸುತ್ತಿದ್ದೇನೆ.

ಬೆಳಗಾವಿಯ ಬಗೆಗೆ, ನಾವು ಏನೂ ಮಾಡುತ್ತಿಲ್ಲವೆಂದು, ಅದರ ಭವಿಷತ್ತಿನ ಬಗೆಗೆ ನನಗೆ ಭಯವೆನಿಸಿದೆ. ಈ ವಿಚಾರ ಕುರಿತು ನಾನು, ಮೊಯಿಲಿಯವರು ಮುಖ್ಯಮಂತ್ರಿಗಳು ಆಗಿದ್ದಾಗ ಅವರಿಗೆ ಬರೆದಿದ್ದೆ. ಅದರ ಬಗೆಗೆ ಅವರಿಗೆ ಪುನಃ ನೆನಪು ಮಾಡಿಕೊಟ್ಟಿದ್ದೆ. ಬೆಳಗಾವಿಯ ಬಗೆಗೆ ಕರ್ನಾಟಕ ಸರಕಾರ ಪರಿಣಾಮಕಾರೀ ಪರಿಹಾರೋಪಾಯಗಳನ್ನು ಕೈಗೊಳ್ಳದೆ ಹೋದರೆ, ಮಾಗಿದ ಹಣ್ಣಿನಂತೆ ತುಂಬು ಕಳಚಿ ಅದು ಮಹಾರಾಷ್ಟ್ರದ ಉಡಿಯಲ್ಲಿ ಬೀಳುವುದೆಂದು ಮೊಯಿಲಿಯವರಿಗೆ ಬರೆದ ಪತ್ರದಲ್ಲಿ ನಾನು ತಿಳಿಸಿದ್ದೆ.

ಕರ್ನಾಟಕ ಸರಕಾರವು ಬೆಳಗಾವಿಯ ಭೂಗೋಳವನ್ನು ಅರಿತುಕೊಳ್ಳುವದು ಅಗತ್ಯವಿದೆ. ಆ ನಗರದ ಮೂರು ದಿಕ್ಕುಗಳಲ್ಲಿ ಅಂದರೆ ದಕ್ಷಿಣ, ಪೂರ್ವ ಹಾಗೂ ಉತ್ತರಗಳಲ್ಲಿ ಕನ್ನಡ ಪ್ರದೇಶ ಇದೆ. ಪಶ್ಚಿಮಕ್ಕೆ ಸಮೀಪದಲ್ಲಿ ಮಹಾರಾಷ್ಟ್ರ ಪ್ರದೇಶ ಇದೆ. ಕರ್ನಾಟಕ ಸರ್ಕಾರವು ಆ ನಗರದಲ್ಲಿ ಏನು ಮಾಡಿದರೂ ಕನ್ನಡ ಪ್ರದೇಶಗಳಿಗೆ ಹೊಂದಿದಂತೆಯೇ ಮಾಡಬೇಕು. ಮಹಾರಾಷ್ಟ್ರದ ಕಡೆಗೆ ಖಂಡಿತ ಮಾಡಬಾರದು.

ಕರ್ನಾಟಕ ಸರಕಾರವು ಚಿಕ್ಕ ಉದ್ದಿಮೆಗಳನ್ನು ಬೆಳೆಸಲು ಖಾನಾಪೂರದ ಕಡೆಗೆ ಇರುವ ಪ್ರದೇಶಗಳನ್ನು ಆರಿಸಿಕೊಂಡಿದೆ. ಕರ್ನಾಟಕ ದೃಷ್ಟಿ ಇರುವವರು ಆ ಕೆಲಸ ಮಾಡುವುದಿಲ್ಲ, ಯಾಕೆಂದರೆ, ಮಹಾಜನ ವರದಿಯ ಮೇರೆಗೆ ಖಾನಾಪೂರ ತಾಲೂಕು ಮಹಾರಾಷ್ಟ್ರಕ್ಕೆ ಹೋಗಲಿದೆ.

ಚಿಕ್ಕ ಉದ್ದಿಮೆಗಾರರಲ್ಲಿ ಬಹುತೇಕ ಜನ ಮರಾಠಿಯವರೇ ಆಗಿದ್ದಾರೆ. ಕನ್ನಡಿಗರು, ಅಕ್ಕಿಯಲ್ಲಿಯ ಹರಳುಗಳಂತೆ ಅಲ್ಲೊಬ್ಬರು ಇಲ್ಲೊಬ್ಬರು ಮಾತ್ರ ಸಿಕ್ಕುತ್ತಾರೆ. ಈ ಉದ್ದಿಮೆ ಕ್ಷೇತ್ರದಲ್ಲಿ ಮರಾಠಿ ಸಂಖ್ಯೆಯನ್ನು ಹೆಚ್ಚಿಸಿರುವುದು ಆತ್ಮಘಾತುಕ ಕೆಲಸವಲ್ಲದೆ ಬೇರೆ ಇನ್ನೇನೂ ಅಲ್ಲ.

ಹಿಂದೆ, ನಾನು ಕನ್ನಡ ಕಾವಲು ಹಾಗೂ ಗಡಿ ಸಲಹಾ ಸಮಿತಿಯ ಅಧ್ಯಕ್ಷನಾಗಿದ್ದಾಗ, ಬೆಳಗಾವಿಯ ಬಗ್ಗೆ ಏನು ಮಾಡಬೇಕೆನ್ನುವುದನ್ನು ಸರ್ಕಾರಕ್ಕೆ ತಿಳಿಸಲು, ನಮ್ಮ ಸಮಿತಿಯ ಇಬ್ಬರು ಸದಸ್ಯರಾದ ಶ್ರೀ ವೀರಪ್ಪ ಮೊಯಿಲಿ ಹಾಗೂ ಶ್ರೀ ಮಹದೇವ ಬಣಕಾರ ಅವರನ್ನು ಕರೆದುಕೊಂಡು ಬೆಳಗಾವಿಗೆ ಹೋಗಿದ್ದೆ. ನಾವು ಅಲ್ಲಿ ಎರಡು ದಿನ ಇದ್ದು ಸರಕಾರಕ್ಕೆ ಮೂರು ಸೂಚನೆ ನೀಡಿದ್ದೆವು.

೧. ಬೆಳಗಾವಿಯ ಸಮೀಪ ಕಣಬರ್ಗಿಯಲ್ಲಿ ನೇಕಾರ ನಗರ ಸ್ಥಾಪಿಸಿ ಈಚಲಕರಂಜಿಯಲ್ಲಿಯ ಐದು ಸಾವಿರ ಕನ್ನಡ ನೇಕಾರರಿಗೆ, ಅಲ್ಲಿ ಆಶ್ರಯ ಕಲ್ಪಿಸಿ, ಅವರಿಗೆ ಎಲ್ಲ ವಿಧದ ಸೌಕರ್ಯ ಒದಗಿಸಬೇಕು. ಐದು ಸಾವಿರ ಕುಟುಂಬಗಳು ಬಂದರೆ, ಒಂದು ಕುಟುಂಬದಲ್ಲಿ ಐದೇ ಐದು ಜನರಿರುವರೆಂದರೂ ಇಪ್ಪತ್ತೈದು ಸಾವಿರ ಜನ ಆಗುತ್ತಾರೆ. ಆ ನೇಕಾರ ನಗರವನ್ನು ಬೆಳಗಾವಿ ನಗರಕ್ಕೆ ಸೇರಿಸಬೇಕು.

೨. ಬೆಳಗಾವಿ ನಗರದ ಸುತ್ತಲೂ ಮನೆ ಕಟ್ಟಿಕೊಳ್ಳಲು ಕನ್ನಡಿಗರು ಯಾರೇ ಗೃಹ ನಿರ್ಮಾಣ ಸಂಘ ಸ್ಥಾಪಿಸಿಕೊಳ್ಳಲು ಮುಂದೆ ಬಂದರೆ, ಅವರಿಗೆ ಅನುಮತಿ ನೀಡಬೇಕು. ಅವರು ಕಟ್ಟಿಕೊಳ್ಳುವ ಮನೆಗಳಿಂದ ಕನ್ನಡಿಗರ ಜನಸಂಖ್ಯೆ ಬೆಳೆಯುತ್ತದೆ.

೩. ಬೆಳಗಾವಿಯಿಂದ ಧಾರವಾಡಕ್ಕೆ ಹೋಗುವ ಮಾರ್ಗದಲ್ಲಿರುವ ಹಲಗಿ ಗ್ರಾಮದ ಬಳಿಯಲ್ಲಿ ಒಂದು ಕೃಷಿ ವಿದ್ಯಾಲಯವನ್ನು ಸ್ಥಾಪಿಸಬೇಕು. ಅದನ್ನು ಬೆಳಗಾವಿ ಮಹಾನಗರ ಸಭೆಯ ಕ್ಷೇತ್ರಕ್ಕೆ ಸೇರಿಸಬೇಕು.

ನಾವು ಸೂಚಿಸಿದ ಈ ಮೂರೂ ಸೂಚನೆಗಳ ಪೈಕಿ ಯಾವುದೂ ಕಾರ್ಯ ರೂಪಕ್ಕೆ ಬರಲಿಲ್ಲ.

ನೀವು ಬೆಳಗಾವಿಯ ಪ್ರಾಮುಖ್ಯತೆ ಹೆಚ್ಚಿಸುವ ಕುರಿತು ಇನ್ನೂ ಹಲವಾರು ಕ್ರಮಗಳನ್ನು ಕೈಗೊಳ್ಳುವುದು ಅಗತ್ಯವಿದೆ. ಬೆಳಗಾವಿ ನಗರದಲ್ಲಿರುವ ಕನ್ನಡ ಶಾಲೆಗಳು ವಿಸ್ತಾರಗೊಳ್ಳಬೇಕು. ಸುಸಜ್ಜಿತಗೊಳ್ಳಬೇಕು. ಹೊಸ ಬಡಾವಣೆಗಳಲ್ಲಿ ಕನ್ನಡ ಶಾಲೆಗಳು ಬರಬೇಕು.

ಬೆಳಗಾವಿ ನಗರಕ್ಕೆ ಇನ್ನೂ ಹೆಚ್ಚು ವಿಭಾಗೀಯ ಕಚೇರಿಗಳು ಬರಬೇಕು. ಈಗ ಬೆಳಗಾವಿಯಿಂದ ೧೮ ಕಿಲೋಮೀಟರ ದೂರದಲ್ಲಿರುವ, ಭೂತರಾಮನಹಟ್ಟಿಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ ಇದೆ. ಅದನ್ನು ಅಲ್ಲಿ ಹೆಚ್ಚು ಬೆಳೆಯಗೊಡದೇ ಅಷ್ಟಕ್ಕೇ, ನಿಲ್ಲಿಸಿ ಸ್ನಾತಕೋತ್ತರ ಕೇಂದ್ರದ ಹೆಚ್ಚಿನ ವಿಸ್ತರಣೆಯನ್ನು ಬೆಳಗಾವಿಯ ಸಮೀಪ ಮಹಾಂತೇಶ ನಗರದ ಆಚೆಗೆ ಕೈಗೊಳ್ಳಬೇಕು.

ಅದು ಇಂದಲ್ಲ ನಾಳೆ, ಸಂಪೂರ್ಣ ವಿಶ್ವವಿದ್ಯಾಲಯ ಆಗುತ್ತದೆ. ಆ ವಿಸ್ತರಣೆಯನ್ನು ಬೆಳಗಾವಿ ಮಹಾನಗರ ಸಭೆಯ ಕ್ಷೇತ್ರದೊಳಗೆ ಸಮಾವೇಶ ಮಾಡಬೇಕು.

ಇವುಗಳ ಜತೆಗೆ ಬೆಳಗಾವಿಯ ಮಹತ್ವವನ್ನು ಶಾಶ್ವತವಾಗಿ ಹೆಚ್ಚಿಸುವುದಕ್ಕೋಸುಗ ವಿಧಾನ ಸಭೆಯ ಒಂದು ಅಧಿವೇಶನವನ್ನು ಪ್ರತಿವರ್ಷ ಚಳಿಗಾಲದಲ್ಲಿ ಅಲ್ಲಿ ಸಮಾವೇಶಗೊಳಿಸಬೇಕು.

ಬೆಳಗಾವಿ ಸಮೀಪದಲ್ಲಿ ಒಂಬತ್ತು ಕಿಲೋಮೀಟರ್ ದೂರದಲ್ಲಿ ಮಹಾರಾಷ್ಟ್ರ ಪ್ರದೇಶಕ್ಕೆ ಸೇರಿದ ಚಂದಗಡ ತಾಲೂಕಿನ ಶಿನೋಳಿ ಗ್ರಾಮ ಇದೆ. ಅದನ್ನು ಈಗ ಗ್ರಾಮವೆಂದು ಕರೆಯಲು ಆಗುವುದಿಲ್ಲ. ಯಾಕೆಂದರೆ, ಮಹಾರಾಷ್ಟ್ರ ಸರ್ಕಾರವು ಅದನ್ನು ಬೃಹತ್ತಾಗಿ ಬೆಳೆಸಿದೆ. ಅಲ್ಲಿ ಭಾರೀ ಉದ್ದಿಮೆಗಳು ಬಂದಿವೆ. ಅದನ್ನು ಬೆಳಗಾವಿಯ ಹೊಸೂರು ಎಂದು

ಹೇಳಬಹುದು. ಅಲ್ಲಿಯ ಉದ್ದಿಮೆಗಳ ಜನ ಬೆಳಗಾವಿಯಲ್ಲಿ ಇದ್ದು, ಅಲ್ಲಿಯ ಮೂಲಭೂತ ಸೌಕರ್ಯಗಳನ್ನು ಉಪಯೋಗಿಸಿಕೊಂಡು ತಮ್ಮ ಉದ್ದಿಮೆಗಳನ್ನು ನಡೆಸುತ್ತಾರೆ.

ಉದ್ದಿಮೆ ಸ್ಥಾಪಿಸಬೇಕೆಂದವರಿಗೆ ಮಹಾರಾಷ್ಟ್ರ ಪ್ರದೇಶದಲ್ಲಿ ಬಹಳಷ್ಟು ಸವಲತ್ತುಗಳು ಇವೆ. ಅವರಿಗೆ ವಾಣಿಜ್ಯ ತೆರಿಗೆಯಲ್ಲಿ ದೀರ್ಘಾವಧಿ ವಿನಾಯಿತಿ ಇದೆ. ಅವರು ಅಡೆತಡೆ ಇಲ್ಲದಂತೆ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿಕೊಳ್ಳಬಹುದು. ಅವರು ಆರಂಭಿಸುವ ಉದ್ದಿಮೆಗಳಿಗೆ ಶೇಕಡಾ ೨೫ ರಷ್ಟು ಸಹಾಯ ಧನ ಸಿಗುತ್ತದೆ. ಉದ್ದಿಮೆಗಳನ್ನು ಬೆಳೆಸುವುದಕ್ಕೆ ಬೇರೆ ಇನ್ನೇನು ಬೇಕು ?

ಬೆಳಗಾವಿ ಜಿಲ್ಲೆಯ ವ್ಯಾಪಾರ ಮಹಾರಾಷ್ಟ್ರದ ಸಾಂಗ್ಲಿಗೆ ಹೋಗಿದೆ ಎನ್ನುವುದು ಕರ್ನಾಟಕ ಸರಕಾರದ ಅಧಿಕಾರಿಗಳಿಗೆ, ಮಂತ್ರಿಗಳಿಗೆ ತಿಳಿಯದೇ ಇರುವ ವಿಷಯವೇನೂ ಅಲ್ಲ. ಕರ್ನಾಟಕದಲ್ಲಿಯ ವಾಣಿಜ್ಯ ತೆರಿಗೆ ಮಹಾರಾಷ್ಟ್ರದ ವಾಣಿಜ್ಯ ತೆರಿಗೆಗಿಂತ ತುಂಬ ಹೆಚ್ಚು. ಆ ಕಾರಣದಿಂದಲೇ ಕರ್ನಾಟಕದ ಕೃಷಿ ವಸ್ತುಗಳು ಸಾಂಗ್ಲಿ ಪೇಟೆಗೆ ಹೋಗುತ್ತವೆ.

ನಾವು ಸಾಂಗಲಿ ಪೇಟೆಗೆ ಹೋದರೆ ಕರ್ನಾಟಕದ ನಗರವೊಂದರಲ್ಲಿ ಹಾಯ್ದು ಹೋದಂತೆ ಅನುಭವ ಆಗುತ್ತದೆ. ಅಲ್ಲಿರುವ ಬಹುತೇಕ ಜನ ವ್ಯಾಪಾರಸ್ಥರು ಚಿಕ್ಕೋಡಿ, ಹುಕ್ಕೇರಿ, ಸಂಕೇಶ್ವರ, ರಾಯಬಾಗ, ಗೋಕಾಕ ಮೊದಲಾದ ಸ್ಥಳಗಳಿಂದ ಬಂದವರೇ ಆಗಿದ್ದಾರೆ.

ಈ ವಾಣಿಜ್ಯ ತೆರಿಗೆ ವಿಚಾರದಲ್ಲಿ ಬಹಳಷ್ಟು ವ್ಯತ್ಯಾಸ ಇದ್ದರೂ ಕರ್ನಾಟಕ ಸರ್ಕಾರವು ಏನನ್ನೂ ಮಾಡದೆ, ನಿರ್ಲಕ್ಷ ಹಾಗೂ ನಿಷ್ಕಾಳಜಿಯಿಂದ ಕರ್ನಾಟಕದ ವರಮಾನ ಮಹಾರಾಷ್ಟ್ರಕ್ಕೆ ಕಳೆದು ಹೋಗುವಂತೆ ಮಾಡಿದೆ. ಏನು ಮಾಡಿದರೆ ಕರ್ನಾಟಕ ಸರ್ಕಾರವು ಈ ಬಗೆಗೆ ವಿಚಾರ ಮಾಡುತ್ತದೆ? ಪರಿಹಾರೋಪಾಯಗಳನ್ನು ಕೈಗೊಳ್ಳುತ್ತದೆ? ಸರಕಾರವು ಈ ವಿಚಾರವನ್ನು ಒಂದು ಕಿವಿಯಿಂದ ಕೇಳಿ, ಇನ್ನೊಂದು ಕಿವಿಯಿಂದ ಬಿಟ್ಟಿದೆ. ರಾಜ್ಯದ ಬಗೆಗೆ ನಿಜವಾದ ಆಸಕ್ತಿ ಇದ್ದವರು ಈ ವಿಚಾರ ತಿಳಿದ ಮೇಲೆ ಸುಮ್ಮನೆ ಕುಳಿತುಕೊಳ್ಳಬಾರದು.

ಬೆಳಗಾವಿ ಜಿಲ್ಲೆಯ ಅಥಣಿ, ಚಿಕ್ಕೋಡಿ, ಹುಕ್ಕೇರಿ ಹಾಗೂ ಬೆಳಗಾವಿ ತಾಲೂಕುಗಳ ಆಚೆಗೆ ಮಹಾರಾಷ್ಟ್ರ ಇದೆ. ಅಲ್ಲಿ ಅಭಿವೃದ್ಧಿಯ ಬಹಳಷ್ಟು ಚಟುವಟಿಕೆಗಳು ಕಾಣಿಸಿಕೊಂಡು ಆ ಪ್ರದೇಶಗಳ ಜನರು ಅಭ್ಯುದಯ ಹೊಂದುತ್ತ ಮುಂದೆ ನಡೆದಿದ್ದಾರೆ. ಇತ್ತ ಕರ್ನಾಟಕ ಪ್ರದೇಶದಲ್ಲಿ ಏನೂ ನಡದಿಲ್ಲದಿರುವಾಗ, ಅತ್ತ ಮಹಾರಾಷ್ಟ್ರದ ಪ್ರದೇಶದಲ್ಲಿ ಎಲ್ಲವೂ ನಡೆದಿದೆ. ಆ ಗಡಿ ಪ್ರದೇಶದಲ್ಲಿ ಇರುವ ನಮ್ಮ ಜನರಿಗೆ ಕರ್ನಾಟಕದಲ್ಲಿ ಇರುವುದು ಶಿಕ್ಷೆ ಎನಿಸಿದೆ. ಕರ್ನಾಟಕದ ಜನರು ಮಹಾರಾಷ್ಟ್ರದಲ್ಲಿರುವವರನ್ನು ನೋಡಿ ಅವರು ಎಷ್ಟು ಸುದೈವಿಗಳು ಎಂದುಕೊಳ್ಳುತ್ತಿದ್ದಾರೆ. ಮಹಾರಾಷ್ಟ್ರದಲ್ಲಿ ಇದ್ದಿದ್ದರೆ ತಾವು ಕೂಡ ಅಂಥ ಬದಲಾವಣೆ ಕಾಣುತ್ತಿದ್ದೆವೆನ್ನುವ ವಿಚಾರ ಅವರ ಮನಸ್ಸಿನಲ್ಲಿ ಬಂದು ಹೋಗುತ್ತದೆ.

ಗಡಿ ಪ್ರದೇಶದಲ್ಲಿ ಕನ್ನಡಿಗರೇ ಇದ್ದರೂ ಅವರಿಗೆ ಸರಿಯಾದ ಶಾಲೆಯ ಸೌಕರ್ಯಗಳು ಇಲ್ಲ. ಕಡಿಮೆ ಸಂಖ್ಯೆಯಲ್ಲಿ ಮರಾಠಿ ಮಾತನಾಡುವ ಜನ ಇದ್ದರೂ ಅವರಿಗೆ

ಅಲ್ಲಿ ಹೆಚ್ಚಿನ ಸೌಕರ್ಯಗಳು ಇವೆ. ಕನ್ನಡಿಗರಿಗೆ ಆ ಸೌಕರ್ಯ ಇಲ್ಲ. ಕರ್ನಾಟಕವಾಗಿ ನಾಲ್ಕು ದಶಕಗಳು ಕಳೆದು ಹೋದರೂ ಈ ಪರಿಸ್ಥಿತಿ ಹೋಗಲಿಲ್ಲ.

ಕರ್ನಾಟಕದ ಗಡಿ ಪ್ರದೇಶದಲ್ಲಿರುವ ಮರಾಠಿ ಶಾಲೆಗಳು ಮಹಾರಾಷ್ಟ್ರದಲ್ಲಿ ಇದ್ದಂತೆ ಸುಭದ್ರವಾಗಿವೆ. ಕನ್ನಡ ಶಾಲೆಗಳು ಮಹಾರಾಷ್ಟ್ರದಲ್ಲಿಯ ಕನ್ನಡ ಶಾಲೆಗಳು ಇದ್ದಂತೆ ಶಿಥಿಲವಾಗಿದೆ. ಸರ್ಕಾರಕ್ಕೆ ಸಮೀಪ ದೃಷ್ಟಿ ಇರುವುದರಿಂದ ದೂರದಲ್ಲಿರುವ ಕನ್ನಡಿಗರು ಅವರ ಕಣ್ಣಿಗೆ ಕಾಣದಾಗಿದ್ದಾರೆ.

ಕನ್ನಡ ಜನರಿಗೆ ಧೈರ್ಯ ಕೊಡುವಂಥ ವಾತಾವರಣ ಅಲ್ಲಿ ಇಲ್ಲ. ಅವರನ್ನು ಉತ್ಸಾಹಗೊಳಿಸುವ ಯಾವ ಕಾರ್ಯಕ್ರಮಗಳೂ ಅಲ್ಲಿ ನಡೆದಿಲ್ಲ. ತನ್ನನ್ನು ಪ್ರೀತಿಸುವ ಜನರ ಬಗೆಗೆ ಕರ್ನಾಟಕ ಸರಕಾರ ಮಲತಾಯಿ ದೃಷ್ಟಿ ಇರಿಸಿಕೊಂಡಿರಬೇಕೆ?

ಮಹಾರಾಷ್ಟ್ರಕ್ಕೆ ಹೊಂದಿ ಕರ್ನಾಟಕದ ಗಡಿ ಪ್ರದೇಶಗಳಲ್ಲಿ ಸಮ್ಮಿಶ್ರ ಭಾಷೆಯ ಹಳ್ಳಿಗಳಿವೆ. ಮರಾಠಿ ಜನ ಹೆಚ್ಚಿನ ಸಂಖ್ಯೆಯಲ್ಲಿರುವ ಹಳ್ಳಿಗಳಲ್ಲಿ ಕನ್ನಡ ಶಾಲೆಗಳಿಲ್ಲ. ಯಾಕೆಂದರೆ ಸರಕಾರೀ ನಿಯಮದಂತೆ ಒಂದು ವರ್ಗ ನಡೆಸಲು ಬೇಕಾಗುವಷ್ಟು ೩೦ ಜನ ವಿದ್ಯಾರ್ಥಿಗಳು ಸಿಕ್ಕುವುದಿಲ್ಲ. ಅಲ್ಲಿ ಕನ್ನಡ ಶಾಲೆಗಳೇ ಇಲ್ಲವೆಂದ ಮೇಲೆ ಕನ್ನಡ ತಂದೆ ತಾಯಿಗಳು ತಮ್ಮ ಮಕ್ಕಳನ್ನು ಅನಿವಾರ್ಯವಾಗಿ ಮರಾಠಿ ಶಾಲೆಗಳಿಗೆ ಕಳಿಸಬೇಕಾಗುತ್ತದೆ.

ಮರಾಠಿ ಓದುವ ಈ ಕನ್ನಡ ಮಕ್ಕಳು ಮರಾಠಿ ಓದಿ, ಬೆಳೆದ ಮೇಲೆ, ಕನ್ನಡಕ್ಕೆ ಸಂಪೂರ್ಣವಾಗಿ ಕಳೆದು ಹೋಗುತ್ತಾರೆ. ಹಾಗಾದರೆ, ಗಡಿ ಭಾಗಗಳಲ್ಲಿ ಇರುವ ಕನ್ನಡಿಗರು ಮರಾಠಿ ಆಗಬೇಕೆಂದು ಸರಕಾರದ ಉದ್ದೇಶವೇ ?

ಗಡಿ ಪ್ರದೇಶಗಳಲ್ಲಿ, ಕನ್ನಡದ ವಿದ್ಯಾರ್ಥಿಗಳ ಸಂಖ್ಯೆ ನೋಡಿ ಶಾಲೆ ಆರಂಭಿಸಬೇಕೆನ್ನುವ ವಿಚಾರ ಸರಕಾರದ ತಲೆಯಲ್ಲಿ ಇರಬಾರದು. ಕನ್ನಡ ವಿದ್ಯಾರ್ಥಿಗಳು ಐದೇ ಇರಲಿ, ಹತ್ತೇ ಇರಲಿ, ಅಲ್ಲಿ ಒಂದು ಕನ್ನಡ ಶಾಲೆ ಆರಂಭಿಸಬೇಕೆನ್ನುವುದು ಸರಕಾರದ ನೀತಿ ಎನಿಸಬೇಕು. ಕನ್ನಡವನ್ನು ಪ್ರೋತ್ಸಾಹಿಸುವುದೇ ಸರಕಾರದ ಧೋರಣೆಯೆಂದ ಮೇಲೆ ಅದು ಕನ್ನಡವನ್ನು ಬೆಳೆಸುವ ಆ ನೀತಿಗೆ ಬದ್ಧವಾಗಿ ಅಂಟಿಕೊಂಡು ನಿಲ್ಲಬೇಕು.

ಈ ಎಲ್ಲ ವಿಚಾರಗಳನ್ನು ಕುರಿತು ಸರಕಾರ ತೀವ್ರವಾಗಿ ಆಲೋಚಿಸಿ, ಒಂದು ಉಚ್ಚ ಮಟ್ಟದ ಸಭೆಯನ್ನು ಕರೆಯುವ ತೀರ್ಮಾನ ಕೈಕೊಳ್ಳುವುದು ಮತ್ತು ಕಾರ್ಯಕ್ರಮ ಹಾಕಿಕೊಳ್ಳುವುದು ಅಗತ್ಯ ಇದೆ.

೩. ಕನ್ನಡಃ ಕೊಡಗು ಬೀದರಗಳಲ್ಲಿ ಏನಿದೆ?

ಇದು. ಈಗಾಗಲೇ ಏಳೆಂಟು ವರ್ಷಗಳ ಹಿಂದೆ ನಡೆದ ಮಾತು. ಆದರೆ ಅದರ ಪ್ರಸ್ತುತತೆ ಕಡಿಮೆಯಾಗಿಲ್ಲ. ಅದು, ಇನ್ನೂ ಹೆಚ್ಚು ಉತ್ಕಟವಾಗಿ ಬೆಳೆದುಕೊಂಡಿದೆ. ಆ ಕಾರಣದಿಂದ ಅದು ಹೆಚ್ಚು ಗಂಭೀರವೆನಿಸಿದೆ.

ಆಗ ನಾನು, ಕನ್ನಡ ಕಾವಲು ಹಾಗೂ ಗಡಿ ಸಲಹಾ ಸಮಿತಿಯ ಅಧ್ಯಕ್ಷನಾಗಿ ಕೊಡಗು ಜಿಲ್ಲೆಯ ವೀರ ರಾಜೇಂದ್ರ ಪೇಟೆಗೆ ಭೆಟ್ಟಿ ಕೊಟ್ಟಿದ್ದೆ, ಆಡಳಿತದಲ್ಲಿ ಕನ್ನಡವನ್ನು ಅನುಷ್ಠಾನಗೊಳಿಸುವ ಕೆಲಸವು ನನ್ನನ್ನು ಅಲ್ಲಿಗೆ ಕರೆದೊಯ್ದಿದ್ದಿತು.

ಕಚೇರಿಯಲ್ಲಿ ಅಧಿಕಾರಿಗಳನ್ನು ಕಂಡು ಬಂದ ಮೇಲೆ, ಅಂದು ಸಂಜೆ, ಅಲ್ಲಿಯ ಕರ್ನಾಟಕ ಸಂಘದಲ್ಲಿ ಸಭೆ ಏರ್ಪಡಿಸಿದ್ದರು. ಸಭೆಯಲ್ಲಿ ಆ ಪ್ರದೇಶದ ಕನ್ನಡಿಗರು ತಮ್ಮ ನೋವು ವ್ಯಥೆಗಳನ್ನು ನನ್ನೆದುರು ತೋಡಿಕೊಂಡರು. ಅಲ್ಲಿ ಮಲಯಾಳಿಗಳು ಬಹು ದೊಡ್ಡ ಸಂಖ್ಯೆಯಲ್ಲಿ ಬಂದು ಸೇರಿಕೊಂಡು ಅವರೇ ಸ್ಥಳೀಯರೆನಿಸಿದ್ದಾರೆ. ಸ್ಥಳೀಯ ಜನರೇ ಹೊರಗಿನವರಾಗಿದ್ದಾರೆ.

ಉಗ್ರರಾದ ಮಲಯಾಳಿಗಳು ಕನ್ನಡಿಗರ ಸೌಮ್ಯತನದ ಸಂಪೂರ್ಣ ಪ್ರಯೋಜನ ಪಡೆದುಕೊಂಡಿದ್ದಾರೆ. ಸರ್ಪದ ನೆರಳಿನಲ್ಲಿ ಇರುವ ಕಪ್ಪೆಯ ಸ್ಥಿತಿ ಅಲ್ಲಿಯ ಕನ್ನಡಿಗರದಾಗಿದೆ. ಮಲಯಾಳಿಗಳ ಕೃಪಾಕಟಾಕ್ಷ ಕಾಯ್ದುಕೊಂಡು ಬದುಕುವ ಸ್ಥಿತಿ ಅವರಿಗೆ ಬಂದಿದೆ. ಭಯ ಭೀತಿಯ ವಾತಾವರಣದಲ್ಲಿ ಅವರು ಬದುಕಿದ್ದಾರೆ.

ತಾವು ಅನುಭವಿಸುತ್ತಿರುವ ಕಿರುಕುಳಗಳ ಬಗೆಗೆ ಅವರು ಪೋಲೀಸರ ಕಡೆಗೆ ದೂರು ಒಯ್ಯುವುದಕ್ಕೆ ಆಗುವುದಿಲ್ಲ. ಪೋಲೀಸರ ಕಡೆಗೆ ದೂರು ಒಯ್ದರೆ, ಅವರ ಮೇಲಿನ ಕಿರುಕುಳಗಳು ಇನ್ನೂ ಹೆಚ್ಚುತ್ತವೆ. ಅಲ್ಲಿ ಸರಕಾರದ ಕೈಗಳು ದುರ್ಬಲವಾಗಿವೆ. ಕೇರಳೀಯರ ಕೈಗಳೇ ಬಲವಾಗಿವೆ.

ನಾವು, ಕೊಡಗಿನಲ್ಲಿ ನಮ್ಮ ನೆಲೆಯನ್ನು ಭದ್ರವಾಗಿ ಕಾಯ್ದುಕೊಳ್ಳಬೇಕೆನ್ನುವ ಮಾತನ್ನು ನಾನು ಹೇಳಿದಾಗ, ಅದರಿಂದ ಉತ್ತೇಜಿತರಾದ ಅವರು ನನಗೇ ಹೇಳಿದರುಃ 'ನೀವು ಇಲ್ಲಿಗೆ ಆರು ತಿಂಗಳಿಗೆ ಒಂದು ಸಲವಾದರೂ ಬಂದು ನಮ್ಮಲ್ಲಿ ಧೈರ್ಯ ತುಂಬಬೇಕು'.

ಕೊಡಗಿನ ಜನರು ತಮ್ಮ ಮನೆಯಲ್ಲಿಯೇ ಹೆದರಿಕೊಂಡು ಬದುಕುವ ಸ್ಥಿತಿ ಬಂದೊದಗಿದೆ. ಅವರೆಲ್ಲರೂ, ಬ್ರಿಟೀಶರು, ಫ್ರೆಂಚರು, ಮರಾಠರು, ಹೈದರಾಲಿ, ಟಿಪ್ಪು ಇವರ ಯಾರ ಹೊಡೆತಕ್ಕೂ ಮಣಿಯದೇ ಅಜೇಯನಾಗಿ ಉಳಿದ ದೊರೆ ದೊಡ್ಡ ವೀರ ರಾಜೇಂದ್ರನ ಶೌರ್ಯದ ಆಡಳಿತಕ್ಕೆ ಒಳಪಟ್ಟು ಬೆಳೆದವರು. ೪೯ ವರ್ಷಗಳ ದೀರ್ಘಕಾಲ ಅವನು ಆಳ್ವಿಕೆ ನಡೆಸಿದರೂ ಅವನನ್ನು ಹಣಿದು ಹಣ್ಣು ಮಾಡುವುದು ಯಾರೊಬ್ಬರಿಂದಲೂ ಆಗಲಿಲ್ಲ.

ಆಗ ಕೊಡಗಿನೊಳಗೆ ನುಗ್ಗಿ ಬರುವುದು ಯಾರೊಬ್ಬರಿಗೂ ಸಾಧ್ಯವಾಗದೇ ಹೋಯಿತು. ಈಗ, ಮಲಯಾಳಿಗಳಿಗೆ ಅಲ್ಲಿಗೆ ಬಹು ಮುಕ್ತ ರಹದಾರಿ ಏರ್ಪಟ್ಟಿದೆ.

ವೀರ ರಾಜೇಂದ್ರ ಪೇಟೆಯಲ್ಲಿ ಮಾತ್ರವಲ್ಲ. ಅವರು ಕೊಡಗಿನ ತುಂಬೆಲ್ಲ ತೂರಿಕೊಂಡು ಬಂದಿದ್ದಾರೆ. ಕೊಡಗಿನ ಮೂಲವಾಸಿಗಳ ಸಂಖ್ಯೆಯನ್ನು ಸರಿಗಟ್ಟುವಷ್ಟು ಅವರ ಸಂಖ್ಯೆ ಬೆಳೆದುಕೊಂಡಿದೆ. ಮುಂದಿನ ಐದು ವರ್ಷಗಳಲ್ಲಿ ಇನ್ನೊಂದು ಜನಗಣತಿ ಬಂದಾಗ, ಕೊಡಗಿನ ಕನ್ನಡಿಗರ ಸಂಖ್ಯೆಯನ್ನು ಮೀರಿ, ಅಲ್ಲಿಯ ತಮಿಳು ಹಾಗೂ ಮಲಯಾಳಿಗಳ ಸಂಖ್ಯೆ ಬೆಳೆದು ಕೊಂಡಿರುತ್ತದೆ. ಈ ರಾಜ್ಯದಲ್ಲಿ ಬೆಂಗಳೂರು ನಗರ ಜಿಲ್ಲೆಯ ನಂತರ ಕೊಡಗು, ಇನ್ನೊಂದು ಕನ್ನಡೇತರ ಜಿಲ್ಲೆಯಾಗುತ್ತದೆ.

ಈ ಸಂಗತಿಯನ್ನು ಕುರಿತು ನಾನು ಹಲವಾರು ಬಾರಿ ರಾಜ್ಯ ಸರಕಾರದ ಗಮನವನ್ನು ಸೆಳೆದಿದ್ದೇನೆ. ಆದರೆ ಅದರಿಂದ ಯಾವ ಪ್ರಯೋಜನವೂ ಆಗಿಲ್ಲ.

ವೋಟಿನ ರಾಜಕೀಯಕ್ಕೆ ಒಳಗಾಗಿರುವ ನಮ್ಮ ರಾಜಕಾರಣಿಗಳಿಗೆ ಇದರ ಅರಿವು ಆಗಿದ್ದರೂ ಅವರು ಅದರ ಬಗೆಗೆ ಸಂಪೂರ್ಣ ನಿಃಶ್ಚೇಷ್ಟಿತರಾಗಿದ್ದಾರೆ. ಮಲಯಾಳಿಗಳು ಕೊಡಗಿನ ಕಾಡಿನಲ್ಲಿ ಬಂದು ಎಲ್ಲೆಲ್ಲಿಯೋ ತಳ ಊರಿದ್ದಾರೆ.

ಅವರು ಗೋಕರ್ಣದ ಮಹಾಬಲೇಶ್ವರ ಲಿಂಗದಂತೆ ಅಲ್ಲಿ ಪ್ರತಿಷ್ಠಾಪನೆಗೊಂಡಿದ್ದಾರೆ. ಅವರನ್ನು ಸ್ಥಳ ಬಿಡಿಸುವವರು ಯಾರೊಬ್ಬರೂ ಇಲ್ಲ. ನಮ್ಮ ಸರಕಾರದ ಉದಾರ ನೀತಿಯು ಅವರಿಗೆ ತುಂಬ ಸಹಾಯಕವೆನಿಸಿದೆ. ಕಾಡು ಒತ್ತುವರಿ ಮಾಡಿರುವವರ ಅತಿಕ್ರಮಣವನ್ನು ಸಕ್ರಮಗೊಳಿಸುವ ಬಹು ಉದಾರವಾದ ಪರೋಪಕಾರದ ನೀತಿಯನ್ನು ಅನುಸರಿಸಿ, ಅವರಿಗೆ ಆ ಭೂಮಿಯ ಮಾಲೀಕತ್ವ ಕೊಡುವ ಕ್ರಮವನ್ನು ನಮ್ಮ ಸರಕಾರ ಕೈಕೊಂಡಿದೆ.

ಆ ಮಲಯಾಳಿಗಳಿಗೆ ಈಗ ಮತಾಧಿಕಾರ ಬಂದಿರುವುದರಿಂದ ನಮ್ಮ ರಾಜಕಾರಣಿಗಳು ಅವರನ್ನು ಎದುರು ಹಾಕಿಕೊಳ್ಳಬೇಕೆನ್ನುವುದಿಲ್ಲ. ಅದಕ್ಕೆ ಬದಲಾಗಿ ಅವರ ಸ್ನೇಹವನ್ನು ಕೃಷಿ ಮಾಡಿಕೊಳ್ಳಬೇಕೆನ್ನುತ್ತಾರೆ.

ಈ ವಿಚಾರವನ್ನು ಕುರಿತು ನಾನು ಕರುಂಬಯ್ಯನವರು ಅಧ್ಯಕ್ಷರಾಗಿದ್ದ ಜಿಲ್ಲಾ ಪರಿಷತ್ತಿನ ಸಭೆಯಲ್ಲಿ ಪ್ರಸ್ತಾಪಿಸಿದಾಗ, ನಮ್ಮ ರಾಜಕಾರಣಿಗಳು ರಾಜ್ಯದ ಹಿತಾಸಕ್ತಿಗಳ ಬಗೆಗೆ ಏನು ಮಾಡಬಲ್ಲರೆನ್ನುವ ಬಗೆಗೆ ಕರುಂಬಯ್ಯನವರು ನೀಡಿದ ಉತ್ತರ ನಮ್ಮ ಜನರ ಕಣ್ಣು ತೆರೆಸುವಂತೆ ಇದ್ದಿತು.

ಪಾಟೀಲ ಪುಟ್ಟಪ್ಪನವರು ಹೇಳಿದ ವಿಚಾರ ಎಲ್ಲ ಸರಿ. ನಾನು, ಅವರು ಹೇಳಿದ ಎಲ್ಲ ವಿಚಾರ ಒಪ್ಪುತ್ತೇನೆ. ಆದರೆ, ಅವರು ಹೇಳಿದಂತೆ ಮಾಡಿದರೆ ನಮಗೆ ವೋಟು ಸಿಕ್ಕುವುದಿಲ್ಲ.

ಅಂದರೆ, ಈ ರಾಜಕಾರಣಿಗಳು ವೋಟಿಗೋಸುಗ ಏನು ಮಾಡಲೂ ರಾಜ್ಯದ ಹಿತವನ್ನು ಮಾರಿ ಕೊಳ್ಳಲೂ ಕೂಡ ಸಿದ್ಧರೆಂದು ಸ್ಪಷ್ಟ ಪಡುತ್ತದೆ. ನಮ್ಮ ರಾಜ್ಯದ ಕುಂಭಕರ್ಣ ಎಚ್ಚರಗೊಂಡು ಏಳುವ ಹೊತ್ತಿಗೆ ತುಂಬ ತಡವಾಗಿರುತ್ತದೆ. ಆಗುವ ಅನರ್ಥವೆಲ್ಲ ಆಗಿ

ಹೋಗಿ ದೆ.

* * * * *

ಇದು ಕೊಡಗಿನ ಅಸ್ಥಿರ ಚಿತ್ರ. ಕೊಡಗಿನೊಂದಿಗೆ ಹೋಲಿಕೆ ಮಾಡಿದರೆ ಬೀದರಿನ ಚಿತ್ರ ಎಷ್ಟೋ ಪಾಲು ಮೇಲು. ಆದರೆ, ಬೀದರಿಗೆ ತನ್ನ ಸಂಘಟನೆಯನ್ನು ಕಾಯ್ದುಕೊಳ್ಳುವ ಬಲ ಬಂದಿದೆಯೆಂದು ಹೇಳುವುದ ಆಗುವುದಿಲ್ಲ.

ಮಹಾರಾಷ್ಟ್ರಕ್ಕೆ ಹೊಂದಿದ ಆದರ ಪಶ್ಚಿಮ, ಉತ್ತರದ ಗಡಿಗಳು ಬಹು ದುರ್ಬಲವಾಗಿವೆ. ಬಸವ ಕ್ಯಾಣ ಭಾಲ್ಕಿ ಹಾಗೂ ಔರಾದ ತಾಲ್ಲೂಕುಗಳ ಮಹಾರಾಷ್ಟ್ರದ ಗಡಿಯ ಹಳ್ಳಿಗಳಲ್ಲಿ ಕ ಹಾಗೂ ಮರಾಠೀ ಸಮ್ಮಿಶ್ರ ಭಾಷೆಗಳಿವೆ. ಗಡಿ ಪ್ರದೇಶದ ಈ ಹಳ್ಳಿಗಳನ್ನು ಕನ್ನಡಕ್ಕೆ ವ ಕನ್ನಡೀಕರಣದ ಯಾವ ಕಾರ್ಯಕ್ರಮವೂ ನಮ್ಮ ಸರಕಾರಕ್ಕೆ ಇಲ್ಲ. ಯಥಾಸ್ಥಿತಿಯನ್ನು ಕಾಯ್ದುಕೊಂಡು ಬರಬೇಕೆನ್ನುವ ವಿಚಾರ ಅದಕ್ಕೆ ಇದ್ದಂತೆ ತೋರುತ್ತದೆ. ಅಥವಾ ಅದಕ್ಕೆ ಯಾವ ವಿಚಾರವೂ ಇಲ್ಲದೇ ಇರಬಹುದು.

ಮರಾಠೀ ಜನರು ಬಹುಸಂಖ್ಯಾಕರಾಗಿರುವ ಹಳ್ಳಿಗಳಲ್ಲಿ, ಮರಾಠೀ ಶಾಲೆಗಳು ಮಾತ್ರ ಇವೆ. ಕನ್ನಡ ಶಾಲೆಗಳು ಇಲ್ಲ. ಕನ್ನಡ ಶಾಲೆಗಳು ಇಲ್ಲವೆಂದು ಅಲ್ಲಿಯ ತಂದೆ ತಾಯಿಗಳು ತಮ್ಮ ಮಕ್ಕಳನ್ನು ಅನಿವಾರ್ಯವಾಗಿ ಮರಾಠೀ ಮಾಧ್ಯಮದ ಶಾಲೆಗಳಿಗೆ ಕಳಿಸಬೇಕಾಗುತ್ತದೆ. ಮರಾಠಿ ಕಲಿಯುವ ಅವರು ಕನ್ನಡದ ಸಂಪರ್ಕ ಕಳೆದುಕೊಂಡು ಕನ್ನಡಕ್ಕೆ ಶಾಶ್ವತವಾಗಿ ಕಳೆದು ಹೋಗುತ್ತಾರೆ.

ಅಲ್ಲಿಯ ಮರಾಠಿಗರನ್ನು ಕನ್ನಡದವರನ್ನಾಗಿ ಮಾಡಿಕೊಳ್ಳುವ ಪ್ರಶ್ನೆಗಿಂತಲೂ ಕನ್ನಡಿಗರನ್ನು ಕನ್ನಡದವರನ್ನಾಗಿ ಮಾಡಿಕೊಳ್ಳುವ ಪ್ರಶ್ನೆ ಇದೆ. ಅವರನ್ನು ಕನ್ನಡದ ಕಡೆಗೆ ಆಕರ್ಷಿಸಿಕೊಳ್ಳುವ ಯಾವ ಪ್ರಯತ್ನವೂ ನಡೆದಿಲ್ಲ. ಕನ್ನಡಕ್ಕೆ ಲಭಿಸುವುದಕ್ಕಿಂತಲೂ ಅಲ್ಲಿ ಮರಾಠಿಗೆ ಹೆಚ್ಚಿನ ಪರಿಪೋಷಣೆ ಲಭಿಸುವಂತೆ ತೋರುತ್ತದೆ.

ಅಲದೂರ ಎಂಬ ಗ್ರಾಮದಲ್ಲಿ ಸರಕಾರ ಕನ್ನಡ ಮಾಧ್ಯಮದ ಒಂದು ಹೈಸ್ಕೂಲನ್ನು ಸ್ಥಾಪಿಸಿತು. ಕನ್ನಡದ ಬಗೆಗೆ ಕನ್ನಡಿಗರಿಗೇ ಅನಾಸ್ಥೆ ಇದ್ದುದರಿಂದ ಆ ಕನ್ನಡ ಮಾಧ್ಯಮದ ಶಾಲೆಗಳಿಗೆ ಕನ್ನಡ ವಿದ್ಯಾರ್ಥಿಗಳು ಬರಲಿಲ್ಲ. ಅಲ್ಲಿ ಮರಾಠೀ ವಿದ್ಯಾರ್ಥಿಗಳೇ ಬಂದು ಸೇರಿಕೊಂಡರು.

ಮುಂದೆ ಅಲ್ಲಿಗೆ ಕನ್ನಡ ವಿದ್ಯಾರ್ಥಿಗಳು ಬರಬೇಕೆಂದಾಗ, ಅವರಿಗೆ ಇಂಬು ದೊರೆಯಲಿಲ್ಲ. ಅವರು ಒಂದೆರಡು ಕೋಣೆ ಪಡೆದುಕೊಳ್ಳುವುದಕ್ಕೆ ಕೂಡ ಬಹಳಷ್ಟು ಪ್ರಯಾಸ ಪಡಬೇಕಾಯಿತು. ಅನಂತರ ಅದನ್ನು ಕನ್ನಡ ಮಾಧ್ಯಮದ ಶಾಲೆಯನ್ನಾಗಿ ಮಾಡಲು ಅಲ್ಲಿಯ ಜನರು ಭಗೀರಥ ಸಾಹಸವನ್ನೇ ಕೈಕೊಳ್ಳಬೇಕಾಯಿತು.

ಕನ್ನಡ ವಾತಾವರಣವನ್ನು ನಿರ್ಮಿಸಿದರೆ ಮಾತ್ರ ಅಲ್ಲಿ ಕನ್ನಡ ಉಳಿಯಬಲ್ಲದು. ವಿಧಾನ ಸಭೆಗೆ ಆ ಜಿಲ್ಲೆಯಿಂದ ಕನ್ನಡಿಗರೇ ಆರಿಸಿ ಬರುತ್ತಾರೆನ್ನುವುದನ್ನು ನೋಡಿ, ಅಲ್ಲಿ ಕನ್ನಡ ಸುರಕ್ಷಿತವಾಗಿದೆಯೆಂದು ಭಾವಿಸುವದು ತಪ್ಪು. ಗಡಿಗಳು ಬಹಳಷ್ಟು ದುರ್ಬಲವಾಗಿವೆ. ಅಲ್ಲಿಯ ಜನರಿಗೆ ಅಭಿವೃದ್ಧಿ ಕಾರ್ಯಗಳೆಲ್ಲ ಮಹಾರಾಷ್ಟ್ರದಲ್ಲಿ

ನಡೆದಿರುವಂತೆ ತೋರುತ್ತದೆ. ಅವರಲ್ಲಿ ಮಾತ್ರ ಯಾವುದೂ ನಡೆದಿಲ್ಲ. ಕರ್ನಾಟಕದಲ್ಲಿ ಹೀಗೇಕೆ? ಉತ್ತರ ಯಾರಲ್ಲಿದೆ.?

****

೪. ನೆರೆನಾಡಿನ ಕನ್ನಡಿಗರು

ನೆರೆ ನಾಡಿನಲ್ಲಿ ಇರುವ, ಹೊರ ನಾಡಿನಲ್ಲಿ ಇರುವ ಕನ್ನಡಿಗರ ಬಗೆಗೆ ತನ್ನ ಸಂಬಂಧದ ಒಂದು ಹೊಣೆಗಾರಿಕೆ ಇದೆ ಎನ್ನುವುದನ್ನು ಕರ್ನಾಟಕ ಸರಕಾರ ತಿಳಿದುಕೊಳ್ಳಬೇಕಾದ ಅವಶ್ಯಕತೆ ಇದೆ. ಕನ್ನಡದ ಹಿತಾಸಕ್ತಿಗಳನ್ನು ನೋಡಿಕೊಳ್ಳುವ ಒಂದು ಏಜನ್ಸಿ ಯಾವುದಾದರೂ ಇದ್ದರೆ, ಅದು ಕರ್ನಾಟಕ ಸರಕಾರ ಒಂದೇ ಆಗಿದೆ. ಆ ಹೊಣೆಯನ್ನು ಅದು ನಿರ್ವಹಿಸಬೇಕು.

ನೆರೆ ನಾಡಿನಲ್ಲಿರುವ ಕನ್ನಡಿಗರು ನಮಗೆ ಹೊರಗಿನವರೇನೂ ಅಲ್ಲ. ನಿನ್ನೆಯವರೆಗೂ ಅವರು ನಮ್ಮವರೇ ಆಗಿದ್ದರು. ನೂತನ ರಾಜ್ಯ ರಚನೆಗೊಳ್ಳುವ ಕಾಲದಲ್ಲಿ ತಾವೂ ಕರ್ನಾಟಕದಲ್ಲಿ ಬರಬೇಕೆಂದು ಅವರೂ ಹಂಬಲ ಹೊತ್ತಿದ್ದರು. ಕರ್ನಾಟಕದಲ್ಲಿ ಸೇರಬೇಕೆಂದು ಅವರೂ ಕೂಡ ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದ್ದರು. ಆದರೆ, ರಾಜ್ಯ ಪುನರ್ ಘಟನಾ ಆಯೋಗದ ವರದಿ ಅವರನ್ನು ನಿಯೋಜಿತ ಕರ್ನಾಟಕ ರಾಜ್ಯದಿಂದ ಹೊರಗೆ ಇರಿಸಿತು.

ಅವರು ತಮ್ಮ ಯಾವ ತಪ್ಪೂ ಇಲ್ಲದೇ ಕರ್ನಾಟಕ ರಾಜ್ಯದಿಂದ ಹೊರಗೆ ಉಳಿದರು. ಅವರಲ್ಲಿ ಕೆಲವರು ಮಹಾರಾಷ್ಟ್ರದಲ್ಲಿ ಇದ್ದಾರೆ. ಇನ್ನು ಕೆಲವರು ಆಂಧ್ರ ಪ್ರದೇಶದಲ್ಲಿದ್ದಾರೆ. ಮತ್ತೆ ಕೆಲವರು ತಮಿಳುನಾಡಿನಲ್ಲಿದ್ದಾರೆ. ಬೇರೆ ಕೆಲವರು ಕೇರಳದಲ್ಲಿದ್ದಾರೆ.

ಅಲ್ಲಿಯ ಸರಕಾರಗಳ ಅನುದಾರ ಧೋರಣೆಯಿಂದ ಅವರು ಕನ್ನಡಕ್ಕೆ, ಕನ್ನಡ ಸಂಸ್ಕೃತಿಗೆ ಎರವಾಗಿದ್ದಾರೆ. ಅಲ್ಲಿ ಅವರಿಗೆ ತಮ್ಮ ಮಕ್ಕಳನ್ನು ಓದಿಸಲು ಸರಿಯಾದ ಅವಕಾಶಗಳು ಕೂಡ ಇಲ್ಲ.

ಮಾತೃಭಾಷೆಯಲ್ಲಿ ಶಿಕ್ಷಣ ಪಡೆಯುವ ಹಕ್ಕನ್ನು ಅವರಿಗೆ ಸಂವಿಧಾನ ನೀಡಿದ್ದರೂ ಅವರು ಇರುವ ಸರಕಾರಗಳು, ಅದನ್ನು ಅವರಿಗೆ ನಿರಾಕರಿಸಿವೆ. ದೇವರು ಕೊಟ್ಟರೂ ಪೂಜಾರಿ ಕೊಡಲಿಲ್ಲ ಎಂಬಂತೆ ಅವರ ಸ್ಥಿತಿಯಾಗಿದೆ. ಅವರ ಸರ್ಕಾರಗಳಂತೂ ಅಲ್ಲಿ ಹೊಸ ಕನ್ನಡ ಶಾಲೆಗಳನ್ನು ತೆರೆಯುವುದಿಲ್ಲ. ಇದ್ದ ಕನ್ನಡ ಶಾಲೆಗಳೂ ಕೂಡ ಮುಚ್ಚಿ ಹೋಗ ತೊಡಗಿವೆ.

ಕರ್ನಾಟಕ ರಾಜ್ಯದಲ್ಲಿರುವ ಮರಾಠಿ, ತೆಲುಗು, ತಮಿಳು ಹಾಗೂ ಮಲೆಯಾಳಿ ಅಲ್ಪ ಸಂಖ್ಯಾತರ ಮಕ್ಕಳಿಗೆ ಕರ್ನಾಟಕ ಸರ್ಕಾರವು, ಅವರ ಶಾಲಾ ಶಿಕ್ಷಣದ ಎಲ್ಲ ಸೌಕರ್ಯಗಳನ್ನೂ

ಒದಗಿಸಿಕೊಟ್ಟಿದೆ. ನೆರೆಯ ರಾಜ್ಯಗಳಲ್ಲಿ ರಾಜ್ಯ ಪುನರ್ ಘಟನಾ ಪೂರ್ವದಲ್ಲಿ ಇದ್ದ ಶಾಲಾ ಸೌಕರ್ಯಗಳು ಈಗ ಇಲ್ಲ. ಅವು ಅರ್ಧಕ್ಕಿಂತ ಕಡಿಮೆ ಆಗಿವೆ.

ನಾನು ಕನ್ನಡ ಕಾವಲು ಹಾಗೂ ಗಡಿ ಸಲಹಾ ಸಮಿತಿಯ ಅಧ್ಯಕ್ಷನಾಗಿದ್ದಾಗ, ನೆರೆಯ ರಾಜ್ಯಗಳಲ್ಲಿಯ ಕನ್ನಡಿಗರ ಕುಂದುಕೊರತೆಗಳನ್ನು ಕುರಿತು ಸಂಬಂಧಿಸಿದ ಸರಕಾರಗಳಿಗೆ ಕಾಗದ ಬರೆಯುತ್ತಿದ್ದೆ. ಈಗ ಈ ವಿಚಾರ ಕುರಿತು ಯಾರೊಬ್ಬರೊಂದಿಗೂ ಪತ್ರ ವ್ಯವಹಾರ ನಡೆದಿಲ್ಲವೆಂದು ಕೇಳಿದ್ದೇನೆ. ನನ್ನ ತಿಳುವಳಿಕೆ ತಪ್ಪಾಗಿರಬಹುದು. ಇಂಥ ಪತ್ರ ವ್ಯವಹಾರರವನ್ನು ಸರಕಾರದಲ್ಲಿ ಯಾರಾದರೂ ನೆರೆಯ ರಾಜ್ಯಗಳೊಂದಿಗೆ ಮಾಡಿದ್ದರೆ ನನಗಿಂತ ಹೆಚ್ಚಿನ ಸಂತೋಷ ಬೇರೆ ಯಾರಿಗೂ ಆಗಲಾರದು.

ಈ ಪ್ರದೇಶಗಳ ಜನರು, ನಮ್ಮ ಸರ್ಕಾರದಲ್ಲಿ ನನಗೇನೋ ಸಂಬಂಧ ಇದೆಯೆಂದು ತಿಳಿದು ಕೊಂಡು ಈಗಲೂ ನನಗೆ ಪತ್ರ ಬರೆದು ತಮ್ಮ ಪರಿಪಾಟಲನ್ನು ನನ್ನೆದುರು ತೋಡಿಕೊಳ್ಳುತ್ತಿದ್ದಾರೆ.

ಮಹಾರಾಷ್ಟ್ರದ ಸಾಂಗಲಿ ಜಿಲ್ಲೆಯ ಜತ್ತ ತಾಲೂಕಿಗೆ ಅಲ್ಲಿಯ ಜಿಲ್ಲಾ ಪರಿಷತ್ತಿನವರು ೪೫ ಅಂಗನವಾಡಿಗಳನ್ನು ಕೊಟ್ಟಿದ್ದರು. ಅವೆಲ್ಲವೂ ಮರಾಠೀ ಅಂಗನವಾಡಿಗಳು. ಕನ್ನಡ ಅಂಗನವಾಡಿ ಒಂದೂ ಇಲ್ಲ. ಇದೇ ಸ್ಥಿತಿ ದಕ್ಷಿಣ ಸೊಲ್ಲಾಪುರ ಹಾಗೂ ಅಕ್ಕಲಕೋಟೆಯಗಳಲ್ಲಿಯೂ ಇದೆ. ಅಲ್ಲಿಯ ಕನ್ನಡ ಜನರ ಗೋಳನ್ನು ಕೇಳುವವರು ಯಾರೂ ಇಲ್ಲದಾಗಿದ್ದಾರೆ. ಸೋಲಾಪುರ ನಗರದಲ್ಲಿ ಅರ್ಧಕ್ಕೆ ಮೇಲ್ಪಟ್ಟು ಜನ ಕನ್ನಡಿಗರು ಇದ್ದರೂ ಅವರ ಮಕ್ಕಳಿಗೆ ಅಲ್ಲಿ ಶಾಲಾ ಸೌಕರ್ಯಗಳು ಇಲ್ಲ. ಇರುವ ಕೆಲ ಶಾಲೆಗಳೂ ಕೂಡ ಇಂದು ನಾಳೆ ಬೀಳುವ ದನದ ದೊಡ್ಡಿಗಳಾಗಿವೆ.

ಆಂಧ್ರ ಪ್ರದೇಶದಲ್ಲಿ ಕನ್ನಡವು ಜೀವನ್ಮೃತಾವಸ್ಥೆಗೆ ಬಂದಿದೆ. ಕನ್ನಡವನ್ನು ಮುಗಿಸುವ ಕೆಲಸ ಅಲ್ಲಿ ಬಹು ವ್ಯವಸ್ಥಿತ ರೀತಿಯಿಂದ ನಡೆದಿದೆ. ಅನಂತಪೂರ ಜಿಲ್ಲೆಯ ರಾಯದುರ್ಗ ತಾಲೂಕಿನಲ್ಲಿ ಕರ್ನೂಲ ಜಿಲ್ಲೆಯ ಆಲೂರು ಆದ್ವಾನಿ ತಾಲೂಕುಗಳಲ್ಲಿ, ನಮ್ಮ ತುಮಕೂರು ಜಿಲ್ಲೆಯ ಹೊಟ್ಟೆಯೊಳಗೆ ಇರುವ ಆಂಧ್ರದ ಮಡಕಸಿರಾ ತಾಲ್ಲೂಕಿನಲ್ಲಿ, ಮಹಬೂಬ ನಗರ ಜಿಲ್ಲೆಯ ಮಕ್ತಲ್ ಸರ್ಕಲ್ಲಿನ ಕೃಷ್ಣಾದಲ್ಲಿ, ಕನ್ನಡ ಶಾಲೆಗಳು ನಶಿಸಿ ಹೋಗ ತೊಡಗಿವೆ. ಕೃಷ್ಣಾದಲ್ಲಿ ನನಗೆ ಗೊತ್ತಿದ್ದಂತೆ ಎಂಟು ವರ್ಷಗಳ ಹಿಂದೆ ೧೩ ಕನ್ನಡ ಶಾಲೆಗಳು ಇದ್ದವು. ಈಗ, ಅಲ್ಲಿ ಐದಾರು ಕೂಡ ಉಳಿದಿಲ್ಲವೆಂದು ಕೇಳಿದ್ದೇನೆ.

ಮೇದಕ್ ಜಿಲ್ಲೆಯ ನಾರಾಯಣ ಖೇಡ, ಝುಹಿರಾಬಾದ ಹಾಗೂ ಸದಾಶಿವ ಪೇಟಗಳಲ್ಲಿ ೧೦ಂಕ್ಕೆ ೫ಂಕ್ಕೆ ಮೇಲ್ಪಟ್ಟ ಜನ ಕನ್ನಡಿಗರು ಇದ್ದು, ಅಲ್ಲಿ ಇರುವ ಕನ್ನಡ ಶಾಲೆಗಳು ಕೇವಲ ೧೯ ಮಾತ್ರ. ಈ ಶಾಲೆಗಳಲ್ಲಿ ಕನ್ನಡ ಸತ್ತು ಹೋಗಬೇಕೆಂದು ಆಂಧ್ರ ಸರಕಾರವು ಅಲ್ಲಿಗೆ ಕೆಲವು ತೆಲುಗು ಉಪಾಧ್ಯಾಯರನ್ನು ಹಾಕಿ, ಅಲ್ಲಿಯ ಕನ್ನಡ ಉಪಾಧ್ಯಾಯರನ್ನು ತೆಲುಗು ಶಾಲೆಗಳಿಗೆ ವರ್ಗಾಯಿಸುತ್ತಾರೆ. ತೆಲುಗು ಶಿಕ್ಷಕರಿಗೆ ಕನ್ನಡ ಬರುತ್ತದೆ. ಆದರೆ ಕನ್ನಡ ಶಿಕ್ಷಕರಿಗೆ ತೆಲುಗು ಬರುವುದಿಲ್ಲ.

ಆಂಧ್ರದ ಶಾಲೆಗಳಲ್ಲಿ ಕನ್ನಡ ಪಠ್ಯ ಪುಸ್ತಕಗಳು ಇಲ್ಲ. ಅಲ್ಲಿಯ ಶಿಕ್ಷಕರು ತೆಲುಗು ಪಠ್ಯ

ಪುಸ್ತಕಗಳನ್ನು ಭಾಷಾಂತರ ಮಾಡಿ ಕನ್ನಡ ವಿದ್ಯಾರ್ಥಿಗಳಿಗೆ ಹೇಳಬೇಕು. ಅವರು ಹೇಳಿದ್ದನ್ನು ಬರೆದು ಕೊಳ್ಳುವ ವಿದ್ಯಾರ್ಥಿಗಳು ಅದನ್ನೇ ಕನ್ನಡ ಪಠ್ಯ ಪುಸ್ತಕವೆಂದು ಬಗೆದು ಓದಿ ಪರೀಕ್ಷೆಗೆ ಕಟ್ಟಬೇಕು. ಇಂಥ ಸ್ಥಿತಿ ಅಲ್ಲಿ ಇದೆ.

ತಮಿಳು ನಾಡಿಗೆ ಬಂದರೆ ಅಲ್ಲಿಯ ಕನ್ನಡಿಗರ ಸ್ಥಿತಿ ತುಂಬಾ ಶೋಚನೀಯವಾಗಿದೆ. ಮದ್ರಾಸ್ ನಗರದಲ್ಲಿ ಆರೇಳು ಲಕ್ಷ ಜನ ಕನ್ನಡಿಗರು ಇದ್ದರೂ ಅಲ್ಲಿ ತಮಿಳುನಾಡು ಸರಕಾರ ನಡೆಸುವ ಒಂದೇ ಒಂದು ಕನ್ನಡ ಪ್ರಾಥಮಿಕ ಶಾಲೆ ಕೂಡ ಇಲ್ಲ. ತಮಿಳುನಾಡಿನ ಸೇಲಂ, ಕೊಯಿಮತ್ತೂರು ಮತ್ತು ನೀಲಗಿರಿ ಜಿಲ್ಲೆಗಳಲ್ಲಿ, ಕಡಿಮೆ ಎಂದರೂ ೨೦ ಲಕ್ಷಕ್ಕೆ ಮೇಲ್ಪಟ್ಟು ಜನ ಕನ್ನಡಿಗರು ಇದ್ದಾರೆ. ಆದರೆ ಅವರಿಗೆ ಕನ್ನಡ ಕಲಿಸುವ ಯಾವ ಸೌಕರ್ಯಗಳನ್ನೂ ತಮಿಳುನಾಡು ಸರಕಾರ ಒದಗಿಸಿಲ್ಲ.

ಕೇರಳ ಸರ್ಕಾರವು, ಕನ್ನಡದ್ದೇ ಆದ ಕಾಸರಗೋಡಿನ ಭಾಷಾ ಸ್ವರೂಪವನ್ನು ಸಂಪೂರ್ಣ ಪಲ್ಲಟಗೊಳಿಸಬೇಕೆಂಬ ಉದ್ದೇಶದಿಂದ, ಕನ್ನಡ ಇರುವ ಕಾಸರಗೋಡಿನೊಂದಿಗೆ ಮಲಯಾಳಿ ಇರುವ ಹೊಸದುರ್ಗ ತಾಲ್ಲೂಕನ್ನು ಸೇರಿಸಿ, ಎರಡು ತಾಲ್ಲೂಕುಗಳ ಒಂದು ಜಿಲ್ಲೆಯನ್ನಾಗಿ ಮಾಡಿದೆ. ಅವರ ಉದ್ದೇಶವು, ಕಾಸರಗೋಡು ಜಿಲ್ಲೆಯಲ್ಲಿ ಮಲೆಯಾಳಿ ಜನರು ಅಧಿಕ ಸಂಖ್ಯೆಯಲ್ಲಿ ಇದ್ದಾರೆಂದು ತೋರಿಸಿಕೊಡುವುದೇ ಆಗಿದೆ.

ಕಾಸರಗೋಡು ತಾಲ್ಲೂಕು ಕನ್ನಡವೆಂದು ಮದ್ರಾಸು ಸರಕಾರ ಒಪ್ಪಿಕೊಂಡಿತ್ತು. ಅದು ತಮಗೆ ಸೇರಿದುದಲ್ಲವೆಂದು ಕೇರಳದವರೂ ಹೇಳುತ್ತಿದ್ದರು. ಸ್ವತಃ ಶ್ರೀ ಇ.ಎಮ್.ಎಸ್. ನಂಬೂದಿರಿಪಾದರು ಚಂದ್ರಗಿರಿಯ ನದಿಯ ಉತ್ತರ ಭಾಗದ ಸಂಸ್ಕೃತಿ ಕೇರಳದ್ದಲ್ಲ ಅದು ಕರ್ನಾಟಕದ್ದೆಂದು ಒಪ್ಪಿಕೊಂಡಿದ್ದರು. ಈ ವಿಚಾರವಾಗಿ ಅವರು ಬರೆದೂ ಬರೆದಿದ್ದರು.

ಕಾಸರಗೋಡಿನ ಎಲ್ಲ ಪಂಚಾಯತಿಗಳು ಇಂದಿಗೂ ತಮ್ಮ ವ್ಯವಹಾರವನ್ನು ಕನ್ನಡದಲ್ಲಿಯೇ ನಡೆಸುತ್ತಿವೆ. ಹೀಗಿದ್ದೂ ಕೂಡ ಕಾಸರಗೋಡನ್ನು ಮಲೆಯಾಳೀ ಮಾಡುವ ಪ್ರಯತ್ನ ಬಹು ವ್ಯವಸ್ಥಿತ ರೀತಿಯಿಂದ ನಡೆದಿದೆ. ಅಲ್ಲಿಯ ಶಾಲೆಗಳಲ್ಲಿ ಕನ್ನಡವನ್ನು ಓಂದೆ ಸರಿಸಿ, ಮಲಿಯಾಳೀ ಭಾಷೆ ಮುಂದೊತ್ತಿಕೊಂಡು ಬರಲು ಆರಂಭಿಸಿದೆ.

ಶಾಲಾ ಪಠ್ಯ ಕ್ರಮದಲ್ಲಿ ಭಾಷಾ ಬೋಧನೆಗೆ ಇಂತಿಷ್ಟು ಗಂಟೆ ಎಂದು ನಿಗದಿ ಮಾಡಿರುತ್ತಾರೆ. ನಾನು ಕಾವಲು ಸಮಿತಿಯ ಅಧ್ಯಕ್ಷನಾಗಿದ್ದಾಗ ಕಾಸರಗೋಡಿಗೆ ಭೇಟಿ ಕೊಟ್ಟಿದ್ದೆ. ಅಲ್ಲಿಯ ಕಲೆಕ್ಟರರೊಂದಿಗೆ ನಾನು ಭಾಷಾ ಬೋಧನೆ ನೀಡಬೇಕಾದ ಸಮಯವನ್ನು ಕುರಿತು ಚರ್ಚೆ ಮಾಡಿದ್ದೆ. ಯಾವುದೇ ಕಾರಣದಿಂದಲೂ ಕನ್ನಡ ಭಾಷೆಯನ್ನು ಬೋಧಿಸುವ ಅವಧಿ ಕಡಿಮೆ ಆಗಬಾರದು ಎಂದು ನಾನು ಅವರನ್ನು ಕೇಳಿದ್ದೆ. ನನ್ನ ಮಾತಿನ ಇಂಗಿತವನ್ನು ಅವರು ಅರಿತರೋ ಇಲ್ಲವೋ, ನಾನು ಪ್ರತಿಪಾದಿಸಿದುದ್ದನ್ನು ಒಪ್ಪಿಕೊಂಡರು. ಕನ್ನಡ ಬೋಧೆಯ ಅವಧಿ ಕಡಿಮೆ ಆದರೇನೇ ಅಲ್ಲಿ ಮಲಿಯಾಳೀ ಬೋಧೆ ಸಾಧ್ಯವಾಗುತ್ತದೆ.

ನಾವು ಒಂದು ಸರ್ಪವಾಗಿ ಕಚ್ಚದಿದ್ದರೂ ''ಭುಸ್'' ಎಂದರೂ ಅನ್ನಬೇಕು ಅದು ಬಹಳಷ್ಟು ಪರಿಣಾಮ ತೋರಿಸಿ ಕೊಡುತ್ತದೆ.

ನೆರೆ ರಾಜ್ಯಗಳ ಕನ್ನಡಿಗರು. ಅಲ್ಲಿ ಭಾಷಾ ಅಲ್ಪ ಸಂಖ್ಯಾತರಾಗಿ ಉಳಿದಿದ್ದಾರೆ. ಅವರ ಬಗ್ಗೆ ನಮ್ಮ ಸಂಬಂಧವೇನೂ ಇಲ್ಲವೆಂಬಂತೆ ನಾವು ಹೊಣೆ ಹಾರಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಆ ಜನ ಈಗ ಬೇರೆ ಸರಕಾರದಲ್ಲಿದ್ದಾರೆ. ನಿಜ. ಆದರೆ ಅವರು. ತೋಳಕ್ಕೆ ಬಲಿ ಕೊಟ್ಟ ಕುರಿಗಳೆಂದು ನಾವು ತಿಳಿಯಬಾರದು.

ಈ ನೆರೆ ರಾಜ್ಯಗಳ ಸರಕಾರಗಳೊಂದಿಗೆ ಕನ್ನಡ ಜನರ ಹಿತಾಸಕ್ತಿಗಳನ್ನು ಕುರಿತು. ನಮ್ಮ ಸರಕಾರ ದ್ವಿಪಕ್ಷೀಯ ಮಾತುಕತೆ ನಡೆಸಬೇಕು. ಆ ಕನ್ನಡ ಜನರಿಗೆ ಇದರಿಂದ ಎಷ್ಟೋ. ಪ್ರಯೋಜನ ಆಗುತ್ತದೆ. ಮತ್ತು ಆ ಜನರ ಮನಸ್ಸಿನಲ್ಲಿ ತಮ್ಮ ವರ್ತಮಾನ ಹಾಗೂ ಭವಿಷ್ಯತ್ತಿನ ಬಗ್ಗೆ ಅದು ಭರವಸೆಗಳನ್ನು ಮೂಡಿಸುತ್ತದೆ.

ನಮ್ಮ ಸರಕಾರ, ನೆರೆ ರಾಜ್ಯಗಳಲ್ಲಿರುವ ಕನ್ನಡಿಗರ ಬಗೆಗೆ ತನಗೆ ಆಸಕ್ತಿ ಇದೆಯೆನ್ನುವದನ್ನು ತೋರಿಸಬೇಕೆಂದು ನನ್ನ ಅಭಿಪ್ರಾಯ ಮತ್ತು ನನ್ನ ಒತ್ತಾಯ. ಈ ನೆರೆಯ ರಾಜ್ಯಗಳಲ್ಲಿ ಇರುವ ಕನ್ನಡಿಗರನ್ನು ಕುರಿತು ವಿಚಾರ ಮಾಡಲು ಸರಕಾರ ಒಂದು ಸಭೆಯನ್ನು ಶೀಘ್ರ ಕರೆದು ತೀರ್ಮಾನ ಕೈಕೊಳ್ಳುವದು ಅಗತ್ಯವಿದೆ.

ಸರಕಾರದಲ್ಲಿ ನೆರೆ ರಾಜ್ಯಗಳೊಂದಿಗೆ ವ್ಯವಹರಿಸುವ ಒಂದು ವಿಭಾಗ ಇದ್ದಿತು. ಅದು ಈಗ ಇಲ್ಲ. ಈಗ ಅದು ಪುನರಾರಂಭಗೊಳ್ಳಬೇಕು.

****

೫. ಹೊರನಾಡಿನ ಕನ್ನಡಿಗರು

ತಮ್ಮ ಮೂಲ ಬೇರುಗಳು ಕರ್ನಾಟಕದಲ್ಲಿ ಇರುವ ಹಲವಾರು ಜನ ಕನ್ನಡಿಗರು. ತಾವು ವೃತ್ತಿ ನಿರತರಾಗಿ ಹೊರ ನಾಡುಗಳಿಗೆ ಹೋಗಿ ಅಲ್ಲಿ ಕೆಲಸ ಮಾಡುತ್ತಿರುತ್ತಾರೆ. ದೂರದ ಸ್ಥಳಗಳಲ್ಲಿ ಇದ್ದು ಆ ಜನರು ಕರ್ನಾಟಕದ ಅನಧಿಕೃತ ರಾಯಭಾರಿಗಳೆಂಬಂತೆಯೇ ಕೆಲಸ ನಿರ್ವಹಿಸುತ್ತಾರೆ. ಇದರಿಂದ, ಕರ್ನಾಟಕದಿಂದ ಅವರು, ಮತ್ತು ಅವರಿಂದ ಕರ್ನಾಟಕ ಪರಿಪೋಷಣೆಯನ್ನು ಪಡೆಯುತ್ತವೆ.

ಕರ್ನಾಟಕದಿಂದ ಹೊರಗೆ ಹೋದ ಈ ಕನ್ನಡಿಗರು ಮುಂಬೈ, ಮದ್ರಾಸ್, ಹೈದ್ರಾಬಾದ್, ಹೊಸದಿಲ್ಲಿ, ಅಹಮದಾಬಾದ, ಬಡೋದೆ, ಭೋಪಾಲ, ಪುಣೆ, ಕಲಕತ್ತ ಮೊದಲಾದ ಕಡೆಗಳಲ್ಲಿ ಇದ್ದಾರೆ. ಅಲ್ಲಿ ಅವರು ವೃತ್ತಿ ಮಾಡುತ್ತ ಕರ್ನಾಟಕದ ತಮ್ಮ ಸಂಬಂಧಗಳನ್ನು ಬಿಗಿಯಾಗಿ ಹಿಡಿದುಕೊಳ್ಳಬೇಕೆನ್ನುತ್ತಾರೆ. ಆ ದೃಷ್ಟಿಯಿಂದ ಅವರು ಅಲ್ಲಿ ಆಗಾಗ ಕನ್ನಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕನ್ನಡ ಸಂಸ್ಕೃತಿಯನ್ನು ಜೀವಂತವಾಗಿ ಉಳಿಸಿಕೊಳ್ಳಬೇಕೆನ್ನುತ್ತಾರೆ.

ಅವರು ಅಲ್ಲಿ ಈ ಕಾರ್ಯಕ್ರಮ ಮಾಡುವುದರಿಂದ ಎರಡು ಕೆಲಸಗಳು ಆಗುತ್ತವೆ. ಒಂದು ಅವರು ತಮ್ಮ ಕನ್ನಡ ಬೇರುಗಳನ್ನು ಬಲಪಡಿಸಿಕೊಳ್ಳುತ್ತಾರೆ. ಎರಡು. ಕರ್ನಾಟಕ ಸಂಸ್ಕೃತಿಯ ಸುಗಂಧವನ್ನು ಅವರು ತಮ್ಮ ಸಂಪರ್ಕದಲ್ಲಿ ಬಂದ ಬೇರೆ ರಾಜ್ಯಗಳ ಜನರಿಗೆ ತೋರಿಸಿಕೊಡುತ್ತಾರೆ

ಅವರ ಕನ್ನಡತನ ಬೆಳೆದುಕೊಳ್ಳುವಂತೆ ಕರ್ನಾಟಕ ಸರ್ಕಾರ. ವಾರ್ತಾ ಇಲಾಖೆಯ ಮೂಲಕ. ಸಂಸ್ಕೃತಿ ಇಲಾಖೆಯ ಮೂಲಕ. ಪರಿಣಾಮಕಾರಿ ಕ್ರಮವನ್ನು ಯೋಜಿಸುವುದು ಅಗತ್ಯವಿದೆ.

ತಮ್ಮ ವೃತ್ತಿಯಲ್ಲಿ ನಿರತರಾದ ವಯಸ್ಕ ಜನರು ಕನ್ನಡದ ಸಂಬಂಧವನ್ನು ಕಳೆದುಕೊಳ್ಳುವುದಿಲ್ಲ. ಆದರೆ. ಅದೇ ಮಾತನ್ನು ಅವರ ಮಕ್ಕಳ ವಿಚಾರದಲ್ಲಿ ಹೇಳುವುದಕ್ಕೆ ಆಗುವುದಿಲ್ಲ. ಅವರಿರುವ ಪ್ರದೇಶದಲ್ಲಿ ಕನ್ನಡ ಶಾಲೆಗಳು ಇಲ್ಲದಿರುವುದರಿಂದ. ಅವರ ಮಕ್ಕಳು ಕನ್ನಡ ಬೋಧೆಗೆ ವಂಚಿತರಾಗುತ್ತಾರೆ. ಅವರು ತಾವಿರುವ ಪ್ರದೇಶಗಳ ಭಾಷೆಯಲ್ಲಿ ಶಿಕ್ಷಣ ಪಡೆಯಬೇಕಾಗುತ್ತದೆ. ಅವರು ಮರಾಠಿ. ಗುಜರಾತಿ. ತೆಲುಗು. ತಮಿಳು. ಹಿಂದಿ. ಬಂಗಾಲಿ ಇವೇ ಮೊದಲಾದ ಭಾಷೆಗಳಲ್ಲಿ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಬೇಕಾಗುತ್ತದೆ.

ಈ ಮಕ್ಕಳು ಕನ್ನಡದವರಾಗಿ ಉಳಿಯಬೇಕಾದರೆ. ಅವರು ಕನ್ನಡವನ್ನು ದ್ವಿತೀಯ ಭಾಷೆಯಾಗಿ ಕಲಿಯುವುದಕ್ಕೆ ಅವಕಾಶ ಇರಬೇಕು. ನನಗೆ ಗೊತ್ತಿರುವಂತೆ. ದೇಶದ ಹಲವಾರು ಕಡೆಗಳಲ್ಲಿ ಇರುವ ಕನ್ನಡಿಗರು ತಮ್ಮ ಶಾಲೆಗಳನ್ನು ಸ್ಥಾಪನೆ ಮಾಡಿಕೊಂಡು. ಅಲ್ಲಿಯ ಭಾಷೆಯಲ್ಲಿ ತಮ್ಮ ಮಕ್ಕಳಿಗೆ ಶಿಕ್ಷಣವನ್ನು ಕೊಡುತ್ತ. ಕನ್ನಡವನ್ನು ದ್ವಿತೀಯ ಭಾಷೆಯಾಗಿ ಅವರಿಗೆ ಕಲಿಸುತ್ತಾರೆ. ಇಂಥ ಶಾಲೆಗಳನ್ನು ಆರಂಭ ಮಾಡಿದ. ಇಲ್ಲವೆ ಮಾಡಬೇಕೆನ್ನುವ ಆ ಜನರಿಗೆ ನಮ್ಮ ಸರಕಾರ ಉದಾರ ಅನುದಾನ ನೀಡಬೇಕು. ಇದು ತನ್ನ ಸ್ವಂತದ ಆಸಕ್ತಿಯ ವಿಷಯವೆಂದು ನಮ್ಮ ಸರಕಾರ ತಿಳಿಯಬೇಕು.

ಹೊರ ನಾಡಿನ ಕೆಲ ನಗರಗಳಲ್ಲಿ ತಮ್ಮ ವೃತ್ತಿ ನಿಮಿತ್ತ ವಾಸವಾಗಿರುವ ಕನ್ನಡಿಗರು ಕರ್ನಾಟಕ ಸಂಘ. ಸ್ಥಾಪನೆ ಮಾಡಿಕೊಂಡು ತಮ್ಮ ಭವನ ಹಾಗೂ ಶಾಲೆ ಕಟ್ಟಿಸಲು ನಿವೇಶನಗಳನ್ನು ಪಡೆದುಕೊಂಡಿದ್ದಾರೆ. ಅವರು ಈ ಕಟ್ಟಡ ಕಟ್ಟಿಕೊಳ್ಳಲು ಕೆಲ ಮಟ್ಟಿನ ನೆರವು ಒದಗಿಸಲು. ಸರಕಾರವು ಒಂದು ಉದಾರ ನೀತಿಯನ್ನು ರೂಪಿಸಿಕೊಳ್ಳಬೇಕು.

ದಿಲ್ಲಿ. ಮುಂಬೈ. ಮದ್ರಾಸ್. ಗೋವಾ. ಮುಂತಾದ ಸ್ಥಳಗಳಲ್ಲಿ ಕನ್ನಡ ವಾರ್ತಾ ಕೇಂದ್ರಗಳನ್ನು ಸ್ಥಾಪಿಸಿ ಬಲಪಡಿಸಬೇಕು. ಅಲ್ಲಿಗೆ ಬರುವವರನ್ನು ಆಕರ್ಷಿಸಿ ಅವರಿಗೆ ಕರ್ನಾಟಕದ ಬಗ್ಗೆ. ಕನ್ನಡ ಸಂಸ್ಕೃತಿಯ ಬಗ್ಗೆ ಸೂಕ್ತವಾದ ತಿಳುವಳಿಕೆ ನೀಡಬೇಕು. ದಿಲ್ಲಿ ಮತ್ತು ಮುಂಬೈಗಳು ಜಗತ್ತಿನ ಪ್ರವಾಸಿಗರ ಕೇಂದ್ರವಾಗಿವೆ. ಆ ಎರಡು ನಗರಗಳಲ್ಲಿ ಕರ್ನಾಟಕವನ್ನು ಪ್ರತಿನಿಧಿಸುವ ಎರಡು ಬೃಹತ್ ಪ್ರದರ್ಶನಾಲಯಗಳು ಬರಬೇಕು. ದಿಲ್ಲಿಯು ನಮ್ಮ ದೇಶದ ರಾಜಧಾನಿ ಆಗಿರುವುದರಿಂದ. ಅಲ್ಲಿಗೆ ಭಾರತದ ಎಲ್ಲ ರಾಜ್ಯಗಳ ಜನರೂ ಬಂದು ಹೋಗುತ್ತಾರೆ. ಅವರಿಗೆಲ್ಲ. ಕರ್ನಾಟಕವನ್ನು ತೋರಿಸಿಕೊಡಲು ಅದು ಬಹು ಪ್ರಶಸ್ತವಾದ

ಸ್ಥಳವಾಗಿದೆ. ಬಹು ಪ್ರತಿಷ್ಠೆಯ ಇಂಥ ಒಂದು ಪ್ರದರ್ಶನಾಲಯ ಮೊದಲು ದಿಲ್ಲಿಯಲ್ಲಿ ಬರಬೇಕು.

ಕರ್ನಾಟಕವನ್ನು ತಿಳಿಸಿ ಕೊಡಲು ನಮ್ಮ ಸರಕಾರವು ದಿಲ್ಲಿಯಲ್ಲಿ ಬಹಳಷ್ಟು ಕೆಲಸ ಮಾಡುವುದು ಸಾಧ್ಯವಿದೆ. ಈಗ ಕನಾಟ್‌ಪ್ಲೇಸ್ ಬಳಿ ಇರುವ ಕನ್ನಡ ವಾರ್ತಾ ಕೇಂದ್ರವನ್ನು ಅಲ್ಲಿಂದ ಯಾವುದೇ ಕಾರಣದಿಂದಲೂ ಸ್ಥಳಾಂತರಿಸಬಾರದು. ಅದನ್ನು ಅಲ್ಲಿಯೇ ಇರಿಸಿ, ಇನ್ನೂ ಹೆಚ್ಚು ಸುಸಜ್ಜಿತಗೊಳಿಸಬೇಕು. ಸರಕಾರಕ್ಕೆ ತಪ್ಪು ಸಲಹೆ ಕೊಡುವ ಜನರಿಗೇನೂ ಕೊರತೆ ಇಲ್ಲ. ಕೆಲವರು ಜಾಣರು ಅದನ್ನು ಚಾಣಕ್ಯಪುರಿಯಲ್ಲಿ ಇರುವ ಕರ್ನಾಟಕ ಭವನಕ್ಕೆ ಸ್ಥಳಾಂತರಿಸಬೇಕೆಂದು ಸರಕಾರಕ್ಕೆ ಸಲಹೆ ಮಾಡಿದ್ದಾರೆಂದು ನಾನು ಕೇಳಿದ್ದೇನೆ. ನಮ್ಮ ಕರ್ನಾಟಕ ಭವನಕ್ಕೆ ಬರುವ ಬಹುತೇಕ ಜನರು ಕರ್ನಾಟಕದವರೇ ಆಗಿರುತ್ತಾರೆ. ಅವರಿಗೆ, ಈ ವಾರ್ತಾ ಕೇಂದ್ರದ ಮೂಲಕ ಕರ್ನಾಟಕದ ಬಗ್ಗೆ ತಿಳಿಸಿಕೊಡಬೇಕೆನ್ನುವ ಉದ್ದೇಶವೇನಾದರೂ ಸರಕಾರಕ್ಕೆ ಇದೆಯೇ? ಆ ವಾರ್ತಾ ಕೇಂದ್ರವನ್ನು ಕನಾಟ್‌ಪ್ಲೇಸ್‌ದಿಂದ ಸ್ಥಳಾಂತರಿಸಬೇಕೆನ್ನುವ ಕೆಲಸವನ್ನು ಸರಕಾರವು ಸರ್ವಥಾ ಮಾಡಬಾರದು.

ದಿಲ್ಲಿ ಮೊದಲಾದ ಕಡೆಗಳಲ್ಲಿ ಇರುವ ಕನ್ನಡ ಶಾಲೆಗಳಿಗೆ ಶಿಕ್ಷಕರನ್ನು ಒದಗಿಸಿಕೊಡುವ ವಿಚಾರದಲ್ಲಿ ಸರಕಾರವು ಉತ್ಸುಕತೆ ಹಾಗೂ ಮುಂಜಾಗ್ರತೆ ಇರಿಸಿಕೊಳ್ಳಬೇಕಾದ ಅವಶ್ಯಕತೆ ಇದೆ. ಕರ್ನಾಟಕದ ಬಗ್ಗೆ ಸದಭಿಪ್ರಾಯ ಮೂಡಿಸುವಂಥ ಬಹು ಉತ್ಸಾಹೀ ಜನರೇ ಅಲ್ಲಿಗೆ ಹೋಗಬೇಕು.

ಕರ್ನಾಟಕ ಸರಕಾರವು ಹೊಸದಿಲ್ಲಿಯಲ್ಲಿರುವ ಕರ್ನಾಟಕ ಭವನದಲ್ಲಿ ಕನ್ನಡ ಕೇಳಿ ಬರುವ ವಾತಾವರಣ ನಿರ್ಮಿಸುವದು ಅಗತ್ಯ ಇದೆ. ಅದು, ತನ್ನ ಎದುರಿಗೆ ಇರುವ ತಮಿಳುನಾಡು ಭವನವನ್ನು, ಇಲ್ಲವೆ ಆಂಧ್ರ ಪ್ರದೇಶ ಭವನವನ್ನು ನೋಡಬೇಕು. ತಮಿಳುನಾಡು ಭವನದಲ್ಲಿ ತಮಿಳಿನ ವಿನಾ ಬೇರೆ ಏನೂ ಕೇಳುವುದಿಲ್ಲ. ಆಂಧ್ರ ಭವನದಲ್ಲಿ ತೆಲುಗಿನ ವಿನಾ ಬೇರೆ ಏನೂ ಕೇಳುವುದಿಲ್ಲ. ಕರ್ನಾಟಕ ಭವನದಲ್ಲಿ ಮಾತ್ರ ಬೇರೆ ಭಾಷೆ ಕೇಳುತ್ತವೆ. ಕನ್ನಡ ಮಾತ್ರ ಕೇಳುವುದಿಲ್ಲ. ಅಲ್ಲಿ ಕೆಲಸ ಮಾಡುವ ಆಯುಕ್ತರಿಂದ ಹಿಡಿದು ಕೆಳಗಿನ ಸೇವಕರವರೆಗೂ ಪ್ರತಿಯೊಬ್ಬನೂ ಕನ್ನಡದವನೇ ಆಗಿರುವಂತೆ ಸರಕಾರ ನೋಡಿಕೊಳ್ಳಬೇಕು.

ಮುಂಬೈಯನ್ನು ನಮ್ಮ ಸರಕಾರ ನಿಷ್ಕಾಳಜಿ ಮಾಡಿ ಬಿಟ್ಟಿದೆ. ಆ ನಗರದಲ್ಲಿ ಕರ್ನಾಟಕದಲ್ಲಿರುವ ಯಾವದೇ ನಗರದಲ್ಲಿ ಇರುವುದಕ್ಕಿಂತಲೂ ಹೆಚ್ಚು ಜನ ಕನ್ನಡಿಗರು ಇದ್ದಾರೆ. ನಮ್ಮ ರಾಜ್ಯದ ಬೆಂಗಳೂರು ಕೂಡ ಮುಂಬೈಯಲ್ಲಿ ಇರುವಷ್ಟು ಕನ್ನಡ ಜನರನ್ನು ಹೊಂದಿಲ್ಲ. ಅಲ್ಲಿ ಏನಿಲ್ಲೆಂದರೂ ೧೫ – ೧೬ ಲಕ್ಷ ಜನ ಕನ್ನಡಿಗರು ಇದ್ದಾರೆಂದು ಹೇಳಿದರೆ ಅಚ್ಚರಿ ಎನಿಸಬಹುದು. ಆದರೆ, ಸತ್ಯವು ಕಟ್ಟು ಕಥೆಗಿಂತಲೂ ಹೆಚ್ಚು ಕೌತುಕದಾಯಕವಾಗಿರುತ್ತದೆ. ಆ ನಗರದ ಬೇರೆ ಬೇರೆ ಪ್ರದೇಶಗಳಲ್ಲಿ ೧೭೪ ಕನ್ನಡ ಸಂಘಗಳಿವೆ.

೧೯೫೬ರಲ್ಲಿ ರಾಜ್ಯ ಪುನರ್ ಘಟನೆ ಆದ ನಂತರ, ಅಲ್ಲಿ ಮರಾಠೀ ಪ್ರಭುತ್ವ ಭದ್ರವಾಗಿ ನೆಲೆಯೂರಿದೆ. ಕನ್ನಡದ ಬಗ್ಗೆ ಅಲ್ಲಿಯ ಮಹಾನಗರ ಪಾಲಿಕೆ ಈಗ ಸಂಪೂರ್ಣ ನಿರ್ಲಕ್ಷ

ತಳೆದಿದೆ. ಅಲ್ಲಿ ಇದ್ದ ಕೆಲವೇ ಕನ್ನಡ ಶಾಲೆಗಳು ಮುಚ್ಚಿ ಹೋಗತೊಡಗಿವೆ. ಹೊಸ ಶಾಲೆಗಳು ಬರುತ್ತಿಲ್ಲ. ಕನ್ನಡ ಶಿಕ್ಷಕರು ನಿವೃತ್ತರಾದಂತೆ ಅವರ ಸ್ಥಳವನ್ನು ತುಂಬಲು ಕನ್ನಡ ಶಿಕ್ಷಕರು ನೇಮಕಗೊಳ್ಳುತ್ತಿಲ್ಲ. ಈ ನಗರದ ೨೦ ಕಾಲೇಜುಗಳಲ್ಲಿ ಕನ್ನಡವನ್ನು ಕಲಿಸುತ್ತಿದ್ದರು. ಈಗ ಆ ಸಂಖ್ಯೆ ಐದಕ್ಕೆ ಇಳಿದಿದೆ. ನಮ್ಮ ಸರಕಾರವು ಈ ವಿಷಯವನ್ನು ಕುರಿತು ಮಹಾರಾಷ್ಟ್ರ ಸರಕಾರದ ಶಿಕ್ಷಣ ಮಂತ್ರಿಯೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿ, ಅವುಗಳಲ್ಲಿ ಕನ್ನಡ ಶಿಕ್ಷಣ ಪುನಃ ಆರಂಭವಾಗುವಂತೆ ನೋಡಿಕೊಳ್ಳಬೇಕು.

ಕನ್ನಡ ವಿದ್ಯಾರ್ಥಿಗಳ-ಸಂಖ್ಯೆ ಕಡಿಮೆ ಇರುವದರಿಂದ ತಾನು ಈ ಕಾಲೇಜುಗಳಲ್ಲಿ ಕನ್ನಡ ಬೋಧೆಯನ್ನು ನಿಲ್ಲಿಸಿರುವದಾಗಿ ಅಲ್ಲಿಯ ಸರ್ಕಾರ ಹೇಳುತ್ತದೆ. ಒಂದು ವೇಳೆ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದ್ದರೆ, ಮಹಾರಾಷ್ಟ್ರ ಸರಕಾರಕ್ಕೆ ಈ ಸಂಖ್ಯೆಯ ಪರಿಮಿತಿ ಅಲ್ಪ ಸಂಖ್ಯಾತ ಭಾಷಾ ಗುಂಪುಗಳಿಗೆ ಅನ್ವಯಿಸಬಾರದೆಂದು ನಮ್ಮ ಸರಕಾರ ಮಹಾರಾಷ್ಟ್ರದ ಮೇಲೆ ಬಿಂಬಿಸಬೇಕು.

ಇದಕ್ಕೂ ಮೀರಿ ಪ್ರಸಂಗ ಮೈಮೇಲೆ ಬಂದರೆ, ನಮ್ಮ ಸರಕಾರವು, ಆ ಕಾಲೇಜುಗಳಲ್ಲಿ ಈ ಕನ್ನಡ ವರ್ಗಗಳನ್ನು ನಡೆಸಲು ತಾನು ಭಾಗಶಃ ಹಣವನ್ನು ನೀಡುವದಾಗಿ ಮಹಾರಾಷ್ಟ್ರಕ್ಕೆ ತಿಳಿಸಬೇಕು.

ಮುಂಬೈ ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಯನ ಪೀಠ ಇದೆ. ಕೆಳಗಿನ ಕಾಲೇಜುಗಳು . ಕನ್ನಡ ವಿದ್ಯಾರ್ಥಿಗಳನ್ನು ಒದಗಿಸಿಕೊಟ್ಟರೇನೇ ಈ ಅಧ್ಯಯನ ಪೀಠ ಅಲ್ಲಿ ಅಸ್ತಿತ್ವದಲ್ಲಿ ಉಳಿಯುವದು ಸಾಧ್ಯವಿದೆ. ಇಲ್ಲದೇ ಹೋದರೆ, ಅದು ಇಲ್ಲದಂತೆ ಮುಚ್ಚಿ ಹೋಗುತ್ತದೆ.

ಅಲ್ಲಿ ಓದುವ ೧೦ ಜನ ವಿದ್ಯಾರ್ಥಿಗಳಿಗೆ ನಮ್ಮ ಸರಕಾರವು ಈಗ ತಲಾ ಪ್ರತಿ ತಿಂಗಳೂ ೧೦೦ ರೂಪಾಯಿ ಶಿಷ್ಯವೇತನ ನೀಡುತ್ತದೆ. ಈ ೧೦೦ ರೂಪಾಯಿ ಮುಂಬೈಯಲ್ಲಿ ಯಾವುದಕ್ಕೂ ಸಾಲುವುದಿಲ್ಲ. ಅವರು ಪಡೆಯುವ ಶಿಷ್ಯ ವೇತನವು ಆ ವಿದ್ಯಾರ್ಥಿಗಳಿಗೆ ಊಟವನ್ನಾದರೂ ಒದಗಿಸಬೇಕು. ಈಗ ಪರಿಶಿಷ್ಟ ಜಾತಿಯ ಒಬ್ಬ ವಿದ್ಯಾರ್ಥಿಗೆ ಸರಕಾರವು ಪ್ರತಿ ತಿಂಗಳೂ ೩೭೫ ರೂಪಾಯಿ ನೀಡುತ್ತದೆ. ಆ ಕನ್ನಡ ವಿದ್ಯಾರ್ಥಿಗಳಿಗೆ ಸರಕಾರವು ೩೭೫ ರೂಪಾಯಿ ನೀಡುವುದು ಬೇಡ. ಕೊನೆಗೆ ೩೦೦ ರೂಪಾಯಿಗಳನ್ನಾದರೂ ನೀಡಬೇಕು. ಶಿಷ್ಯವೇತನ ಪಡೆಯುವ ಸ್ನಾತಕರ ಸಂಖ್ಯೆಯನ್ನು ೧೦ ರಿಂದ ಕನಿಷ್ಟ ೧೫ಕ್ಕಾದರೂ ಏರಿಸಬೇಕು.

ಈ ವಿದ್ಯಾರ್ಥಿಗಳಿಗೆ ನೀಡುವ ಶಿಷ್ಯವೇತನ ವ್ಯರ್ಥ ಹೋಗುವುದಿಲ್ಲ. ಅವರು ಕರ್ನಾಟಕಕ್ಕೆ ಬಂದು ತಮಗೆ ಕೆಲಸ ಕೊಡಬೇಕೆಂದು ಕೇಳುವುದಿಲ್ಲ. ಅವರು ಮುಂಬೈಯಲ್ಲಿಯೇ ಉಳಿದು ತಮ್ಮ ಕೆಲಸವನ್ನು ಅಲ್ಲಿಯೇ ಹುಡುಕಿಕೊಳ್ಳುತ್ತಾರೆ. ತಾನು ಕೊಡುವ ಈ ಶಿಷ್ಯವೇತನ ನಿರುದ್ಯೋಗದ ಡೋಲ್‌ಯೆಂದು ಸರಕಾರ ತಿಳಿಯಬೇಕು. ಅವರು ಕಲಿತು ಬಂದು ನಾಳೆ ಸರ್ಕಾರಕ್ಕೆ ಭಾರವಾಗುವುದಿಲ್ಲ.

ಇದೇ ರೀತಿಯ ಅನುಕೂಲತೆಯನ್ನು ನಮ್ಮ ಸರಕಾರವು ದಿಲ್ಲಿ, ಹೈದ್ರಾಬಾದ್ ಹಾಗೂ ಮದ್ರಾಸ್ ವಿಶ್ವವಿದ್ಯಾಲಯಗಳಲ್ಲಿ ಓದುವ ಕನ್ನಡ ವಿದ್ಯಾರ್ಥಿಗಳಿಗೂ ಒದಗಿಸಬೇಕು.

ಹೊರ ರಾಜ್ಯಗಳಲ್ಲಿ ಇರುವ ಎಲ್ಲ ಕರ್ನಾಟಕ ಸಂಘಗಳಿಗೂ ಸರಕಾರವು ಪ್ರತಿ ವರ್ಷ ಪ್ರಕಟವಾಗುವ ಎಲ್ಲ ಕನ್ನಡ ಪುಸ್ತಕಗಳನ್ನೂ ಉಚಿತವಾಗಿ ಪೂರೈಸಿ ಕೊಡಬೇಕು. ಒಂದಾದರೂ ಕನ್ನಡ ದಿನಪತ್ರಿಕೆ ಹಾಗೂ ಕೆಲ ಕನ್ನಡ ವಾರ ಪತ್ರಿಕೆ ಅವರಿಗೆ ಲಭಿಸುವಂತೆ ನೋಡಿಕೊಳ್ಳಬೇಕು. ಇದು ದೊಡ್ಡ ಕೆಲಸವೇನೂ ಅಲ್ಲ. ಕನ್ನಡ ಸಂಸ್ಕೃತಿ ಸಂಬಂಧವನ್ನು ಉಳಿಸಿಕೊಂಡು ಹೋಗಬೇಕೆನ್ನುವುದಾದರೆ ಈ ಔದಾರ್ಯವನ್ನು ನಾವು ತೋರಿಸಲೇಬೇಕು.

ಈ ವಿಚಾರವನ್ನು ಕುರಿತು ಸರಕಾರದವರು ಹೊರನಾಡಿನ ಸಂಘ ಸಂಸ್ಥೆಗಳ ಪ್ರಾತಿನಿಧಿಕ ಜನರೊಂದಿಗೆ ಚರ್ಚಿಸಿ ಸೂಕ್ತ ತೀರ್ಮಾನ ಕೈಕೊಳ್ಳುವುದು ಅಗತ್ಯ ಇದೆ. ಇದನ್ನು ಸರಕಾರ ಮಾಡಬೇಕು.

****

೬. ಕನ್ನಡವನ್ನು ಕಾಯ್ದುಕೊಳ್ಳುವುದು ಹೇಗೆ ?

ಕನ್ನಡವನ್ನು ಆಡಳಿತದಲ್ಲಿ ಅನುಷ್ಠಾನಗೊಳಿಸಿ ಹಾಗೂ ತಾವಿರುವ ಪ್ರದೇಶಗಳಲ್ಲೆಲ್ಲ ಪ್ರಚಾರ ಗೊಳಿಸುವ ಕಾರ್ಯದಲ್ಲಿ ಸಣ್ಣ ದೊಡ್ಡ ಅಧಿಕಾರಿಗಳು ಬಹು ಮಹತ್ವದ ಪಾತ್ರವನ್ನು ಆಡಬಲ್ಲರು. ಜನರು ಸಾಮಾನ್ಯವಾಗಿ, ಹಿಂದಿನ ಕಾಲದಿಂದಲೂ, ಅಧಿಕಾರದಲ್ಲಿ ಇದ್ದವರನ್ನು ಓಲೈಸಿಕೊಂಡು ಬರಬೇಕೆನ್ನುತ್ತಾರೆ. ಅಧಿಕಾರದಲ್ಲಿದ್ದವರನ್ನು ಭೆಟ್ಟಿ ಮಾಡಿ ಅವರ ಭಾಷೆ ಆಡಿ, ತಮ್ಮ ಕೆಲಸ ಸಾಧಿಸಿಕೊಳ್ಳಬೇಕೆನ್ನುವ ಉದ್ದೇಶ ಅವರದಾಗಿರುತ್ತದೆ.

ಆ ಕಾರಣದಿಂದಲೇ, ರಾಜ್ಯದ ಯಾವ ಅಧಿಕಾರಿಗಳನ್ನು ಯಾವ ಜಿಲ್ಲೆಗೆ ಹಾಕಬೇಕೆನ್ನುವ ಪ್ರಶ್ನೆಗೆ ಭಾರಿ ಮಹತ್ವ ಇದೆ. ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿಯೂ ಕನ್ನಡವು ಏಕ ಪ್ರಕಾರವಾಗಿ ಬೆಳವಣಿಗೆಯನ್ನು ಹೊಂದಿಲ್ಲ. ಕೆಲ ಜಿಲ್ಲೆಗಳಲ್ಲಿ ಬಲವಾಗಿದೆ, ಇನ್ನು ಕೆಲ ಜಿಲ್ಲೆಗಳಲ್ಲಿ ಅದು ದುರ್ಬಲವಾಗಿದೆ.

ಕನ್ನಡವು ದುರ್ಬಲಗೊಂಡಿರುವ ಜಿಲ್ಲೆಗಳಿಗೆ, ಕನ್ನಡದ ಬಗ್ಗೆ ಅನಾಸಕ್ತಿ ಹೊಂದಿದ ಅಧಿಕಾರಿಗಳನ್ನು ಹಾಕಿದರೆ, ಆ ಜಿಲ್ಲೆಯಲ್ಲಿ, ಕನ್ನಡ ಬಲಗೊಳ್ಳುವುದಕ್ಕೆ ಬದಲಾಗಿ, ಇನ್ನಷ್ಟು ದುರ್ಬಲಗೊಳ್ಳುತ್ತದೆ.

ಈ ರಾಜ್ಯದಲ್ಲಿ ಕನ್ನಡವು ದುರ್ಬಲಗೊಂಡಿರುವ ಜಿಲ್ಲೆಗಳು ನಾಲ್ಕು ಇವೆ. ಬೆಳಗಾವಿ, ಬೀದರ್, ಕೊಡಗು ಹಾಗೂ ಬೆಂಗಳೂರು ನಗರ ಜಿಲ್ಲೆ. ಇವೇ ಆ ನಾಲ್ಕು ಜಿಲ್ಲೆಗಳು.

ಬೆಳಗಾವಿ ನಗರದಲ್ಲಿ ಹಾಗೂ ಮಹಾರಾಷ್ಟ್ರಕ್ಕೆ ಹೊಂದಿದ ಬೆಳಗಾವಿ ಜಿಲ್ಲೆಯ ಗಡಿ ತಾಲ್ಲೂಕುಗಳಲ್ಲಿ ಕೆಲ ಕಡೆಗಳಲ್ಲಿ ಮರಾಠಿ ಇದೆ.

ಈ ಒಂದೆ ಬೆಳಗಾವಿಯು ದಕ್ಷಿಣ ಮಹಾರಾಷ್ಟ್ರದ ಭಾಗವೆಂದು ಮುಂಬೈ ರಾಜ್ಯದ ಮರಾಠಿ ಜನರು ಪ್ರಚಾರ ಮಾಡಿಕೊಂಡು ಬಂದರು. ಕೊಲ್ಹಾಪುರದಲ್ಲಿ ರೆಸಿಡೆಂಟ್ ಆಗಿ ಸೇವೆ

ಸಲ್ಲಿಸಿದ ಫ್ಲೀಟ್ ಸಾಹೇಬರಿಗೆ ಇದು ಸಮಂಜಸವೆನಿಸಲಿಲ್ಲ. ಬೆಳಗಾವಿಯ ಜಿಲ್ಲೆಯ ತುಂಬೆಲ್ಲ ಕನ್ನಡ ಇರುವುದನ್ನು ಅವರು ಮನವರಿಕೆ ಮಾಡಿಕೊಂಡಿದ್ದರು. ಆದರೆ, ಮುಂಬೈ ಸರಕಾರವು ಅಲ್ಲಿಗೆ ಮರಾಠೀ ಅಧಿಕಾರಿಗಳನ್ನು ಕಳಿಸುತ್ತಿತ್ತು. ಮತ್ತು ಜಿಲ್ಲೆಯೊಳಗಿನ ಅನೇಕ ಪ್ರದೇಶಗಳಲ್ಲಿ ಮರಾಠಿ ಭಾಷೆಯ ಸಂಸ್ಥಾನಿಕರು ಆಳುತ್ತಿದ್ದುದರಿಂದ ಅಲ್ಲಿ ಮರಾಠಿಗೆ ಪ್ರಾಧಾನ್ಯತೆ ಬಂದಿದ್ದಿತು. ಸುಶಿಕ್ಷಿತ ಜನರ ಮೇಲೆ ಪುಣೆಯ ಪ್ರಭಾವ ಇದ್ದುದರಿಂದ ಮರಾಠಿ ಆಡುವವನು ಸುಸಂಸ್ಕೃತನೆನ್ನುವ ಪ್ರತೀತಿ ಬೆಳೆದುಕೊಂಡು ಬಂದಿದ್ದಿತು. ಒಬ್ಬ ಮನುಷ್ಯ ಸುಧಾರಿಸಿದವನೆನಿಸಬೇಕಾದರೆ ಅವನಿಗೆ ಮರಾಠಿ ಬರಲೇಬೇಕೆಂಬ ತಿಳುವಳಿಕೆ ಆಗಿನ ಕಾಲದಲ್ಲಿ ಮೂಡಿದ್ದಿತು.

ಈ ಹಳೆಯ ಪಳೆಯುಳಿಕೆ ಬೆಳಗಾವಿಗೆ ಈಗಲೂ ಇನ್ನೂ ಅಂಟಿಕೊಂಡಿರುವುದರಿಂದ ಅಲ್ಲಿಗೆ ಗಟ್ಟಿಯಾದ ಕನ್ನಡ ಅಧಿಕಾರಿಗಳನ್ನು ಹಾಕುವುದು ಅಗತ್ಯವಿದೆ.

ಬೆಳಗಾವಿಯು ವಿಭಾಗೀಯ ಕೇಂದ್ರವೂ ಹೌದು. ಜಿಲ್ಲಾ ಕೇಂದ್ರವೂ ಹೌದು. ವಿಭಾಗದ ಕಚೇರಿಯಲ್ಲಾಗಲಿ, ಜಿಲ್ಲಾ ಕಚೇರಿಯಲ್ಲಾಗಲಿ, ಗುಮಾಸ್ತರಿಂದ ಹಿಡಿದು ಮೇಲು ದರ್ಜೆಯವರೆಗೆ ಎಲ್ಲರೂ ಕನ್ನಡದ ಅಧಿಕಾರಿಗಳೇ ಆಗಿರುವಂತೆ ನೋಡಿಕೊಳ್ಳಬೇಕು. ವಿಭಾಗದ ಹಾಗೂ ಜಿಲ್ಲೆಯ ಯಾವುದೇ ಕಛೇರಿಗೆ ಯಾರೊಬ್ಬರು ಹೋದರೂ, ಅವರೊಂದಿಗೆ ಕಛೇರಿಯ ಜನ, ಕನ್ನಡದಲ್ಲಿಯೇ ವ್ಯವಹರಿಸಬೇಕು. ಅಧಿಕಾರಿಗಳು ಕನ್ನಡ ಭಾಷೆಯನ್ನು ಉಪಯೋಗಿಸುವಮೂಲಕವೇ, ಆ ಜಿಲ್ಲೆಯಲ್ಲಿ ಕನ್ನಡ ವಾತಾವರಣವನ್ನು ನಿರ್ಮಿಸುವುದು, ಬೆಳೆಸುವುದು ಸಾಧ್ಯವಿದೆ. ಕಛೇರಿಗೆ ಹೋದವರೆಲ್ಲರಿಗೂ ರಾಜ್ಯದ ಭಾಷೆಯಾದ ಕನ್ನಡ ಬರಲೇಬೇಕೆನ್ನುವದು ಮನವರಿಕೆ ಆಗಬೇಕು.

ಇದು, ಬೆಳಗಾವಿ ಜಿಲ್ಲೆಯಲ್ಲಿ ಅತ್ಯಂತ ಅವಶ್ಯಕವೆನಿಸಿದೆ. ಮರಾಠಿ ಸಂಸ್ಥಾನಿಕರು ಆ ಜಿಲ್ಲೆಯ ಆನೇಕ ಸ್ಥಳಗಳಲ್ಲಿ ಅಧಿಕಾರ ನಡೆಸಿದ್ದುದರಿಂದ ಅವರಿದ್ದ ಪ್ರದೇಶಗಳಲ್ಲಿ ಮರಾಠಿ ಪ್ರಭಾವ ಇದ್ದಿತು. ಅದು ಕನ್ನಡ ಜನರ ಮೇಲೆ ಕೂಡ ಕಾಣಿಸಿಕೊಂಡಿದೆ.

ನಾನು ಕನ್ನಡ ಕಾವಲು ಸಮಿತಿಯ ಅಧ್ಯಕ್ಷನಾಗಿದ್ದಾಗ ಚಿಕ್ಕೋಡಿ ತಾಲೂಕಿನ ಖಿಡಕಲಾಟ ಎಂಬ ಹಳ್ಳಿಗೆ ಹೋಗಿದ್ದೆ. ಅದು ಹಳ್ಳಿಯೇನೂ ಅಲ್ಲ. ೨೦ ಸಾವಿರ ಜನಸಂಖ್ಯೆ ಹೊಂದಿದ ಪಟ್ಟಣ. ಅದು ಮರಾಠಿ ಸಂಸ್ಥಾನಿಕರ ಅಧಿಪತ್ಯಕ್ಕೆ ಒಳಪಟ್ಟಿದ್ದುದರಿಂದ, ಆ ಕನ್ನಡ ಗ್ರಾಮದ ಪಂಚಾಯತಿ ವ್ಯವಹಾರವೆಲ್ಲ ಮರಾಠಿಯಲ್ಲಿಯೇ ನಡೆಯುತ್ತಿದ್ದವು. ೧೯೫೬ರಲ್ಲಿ ಕರ್ನಾಟಕ ರಾಜ್ಯವಾದ ಮೇಲೆ, ಅಲ್ಲಿಗೆ ಒಬ್ಬ ಕನ್ನಡ ಅಧಿಕಾರಿಯನ್ನು ಪಂಚಾಯತಿ ಕಾರ್ಯದರ್ಶಿಯನ್ನಾಗಿ ಕಳಿಸಿದರು. ಆಗ ಪಂಚಾಯತಿಯ ಲೆಕ್ಕ ಪತ್ರಗಳೆಲ್ಲಾ ಕನ್ನಡದಲ್ಲಿಯೇ ಬರತೊಡಗಿದವು. ಕೆಲ ವರ್ಷ ಕಳೆದ ಮೇಲೆ, ಸರಕಾರದವರು ಒಬ್ಬ ಮರಾಠಿ ಅಧಿಕಾರಿಯನ್ನು ಕಾರ್ಯದರ್ಶಿಯನ್ನಾಗಿ ಅಲ್ಲಿಗೆ ಕಳಿಸಿದರು. ಆ ಮೇಲೆ ಆ ಪಂಚಾಯತಿಯ ಲೆಕ್ಕ ಪತ್ರಗಳು ಮತ್ತೆ ಮರಾಠಿಯಲ್ಲಿ ಬರ ತೊಡಗಿದವು.

ಆ ಜಿಲ್ಲೆಯೊಳಗಿನ ಕಛೇರಿಗಳಲ್ಲಿರುವ ಚಿಕ್ಕ ದೊಡ್ಡ ಮರಾಠಿ ಅಧಿಕಾರಿಗಳನ್ನು ಒಂದೆಡೆಯಲ್ಲಿ ಇಡದೆ, ಅವರನ್ನು ಬಿಡಿ ಬಿಡಿ ಮಾಡಿ ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಗೆ

ಕಳಿಸಬೇಕು. ಬೆಳಗಾವಿ ಜಿಲ್ಲೆಯಲ್ಲಿ ಇದ್ದುಕೊಂಡು ಕನ್ನಡಕ್ಕೆ ಉಪದ್ರವ ಕೊಡುತ್ತಿದ್ದ ಅವರು, ಬೇರೆ ಜಿಲ್ಲೆಗಳಲ್ಲಿದ್ದರೆ ಆ ಉಪದ್ರವ ಕೊಡಲಾರರು ಇದರ ಬಗೆಗೆ ಸರಕಾರಕ್ಕೆ ಮನಸ್ಸು ಹಾಗೂ ನಿರ್ಧಾರ, ಎರಡೂ ಬೇಕು.

ಬೆಳಗಾವಿ ಜಿಲ್ಲೆಯ ಖಾನಾಪುರ, ಬೆಳಗಾವಿ, ಹುಕ್ಕೇರಿ, ಚಿಕ್ಕೋಡಿ, ರಾಯಬಾಗ ಹಾಗೂ ಅಥಣಿ ತಾಲ್ಲೂಕುಗಳಲ್ಲಿ ಸರಕಾರ ಎಲ್ಲ ಇಲಾಖೆಗಳಲ್ಲಿಯೂ ಕನ್ನಡದ ಬಗ್ಗೆ ಕಳಕಳಿ ಇರುವ ಅಧಿಕಾರಿಗಳೇ ಇರುವಂತೆ ನೋಡಿಕೊಳ್ಳುವುದು ಅಗತ್ಯವಿದೆ. ಅಲ್ಲಿ ಚಿರಂಜೀವಿ ಸಿಂಗರಂಥ ಅಧಿಕಾರಿಗಳೇ ಬೇಕು. ಚಿರಂಜೀವಿ ಸಿಂಗರೊಂದಿಗೆ ಯಾರಾದರೂ ಇಂಗ್ಲೀಷನಲ್ಲಿ ಮಾತನಾಡಿದರೆ, ಅವರು, ಅವರಿಗೆ ಕನ್ನಡದಲ್ಲಿಯೇ ಉತ್ತರ ಕೊಡುತ್ತಾರೆ. ಅವರು ಮತ್ತೆ ಇಂಗ್ಲೀಷನಲ್ಲಿ ಮಾತನಾಡಿದರೆ, ಅವರು ಅವರಿಗೆ ಮತ್ತೆ ಕನ್ನಡದಲ್ಲಿ ಉತ್ತರ ಕೊಡುತ್ತಾರೆ.

ಬೆಳಗಾವಿ ಜಿಲ್ಲೆಗೆ ಅನ್ವಯಿಸುವದು, ಬೀದರ್ ಜಿಲ್ಲೆಗೂ ಅನ್ವಯಿಸುತ್ತದೆ. ಬೆಳಗಾವಿ ಜಿಲ್ಲೆಯಲ್ಲಿ ಮರಾಠಿ ಭಾಷೆಯ ಪ್ರಶ್ನೆ ಮಾತ್ರ ಇದ್ದರೆ ಬೀದರ್ ಜಿಲ್ಲೆಯಲ್ಲಿ ಉರ್ದು ಹಾಗೂ ಮರಾಠಿ ಭಾಷೆಗಳ ಪ್ರಶ್ನೆ ಇದೆ. ಬೀದರ್ ಜಿಲ್ಲೆಯು ನಿಜಾಮ ಕರ್ನಾಟಕದ ಭಾಗವಾಗಿದ್ದುದರಿಂದ ಅಲ್ಲಿಯ ಜನರಿಗೆ ಸ್ವಾಭಾವಿಕವಾಗಿಯೇ ಉರ್ದು ಬರುತ್ತದೆ. ಒಂದೇ ಪ್ರದೇಶದಿಂದ ಬಂದ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳನ್ನು ಅಲ್ಲಿಗೆ ಹಾಕುವುದರಿಂದ, ಜನರು ಅವರೊಂದಿಗೆ; ಅವರು ಜನರೊಂದಿಗೆ, ಒಂದೇ ಮಾತನಾಡಿಕೊಂಡು ಹೋಗುತ್ತಾರೆ. ಅವರಿಗೆ ಕನ್ನಡದ ಅವಶ್ಯಕತೆಯೇ ಕಾಣುವುದಿಲ್ಲ. ಅವರನ್ನು ಪ್ರಸನ್ನ ಮಾಡಿಕೊಳ್ಳಲು ಜನರು ಕೂಡ ಅವರೊಂದಿಗೆ, ಅವರ ಭಾಷೆಯನ್ನೇ ಮಾತನಾಡಿಕೊಂಡು ಹೋಗುತ್ತಾರೆ. ಇದು ಕನ್ನಡದ ಉಳಿವಿಗೆ ಮಾರಕ ಎನಿಸುತ್ತದೆ.

ಆ ಜಿಲ್ಲೆಯ ಗಡಿ ಭಾಗದ ಭಾಲ್ಕಿ, ಬಸವ ಕಲ್ಯಾಣ ಮತ್ತು ಔರಾದ ತಾಲೂಕುಗಳಲ್ಲಿ ಮರಾಠಿ ಇರುವುದರಿಂದ ಆ ತಾಲ್ಲೂಕುಗಳಿಗೆ ಉರ್ದು ಬಲ್ಲ ಇಲ್ಲವೆ ಮರಾಠಿ ಬಲ್ಲ ಅಧಿಕಾರಿಗಳನ್ನು ಹಾಕಿದರೆ ಜನರು ಅವರೊಂದಿಗೆ ಉರ್ದುವಿನಲ್ಲಿ ಇಲ್ಲವೆ ಮರಾಠಿಯಲ್ಲಿ ವ್ಯವಹರಿಸಿಕೊಂಡು ಹೋಗುತ್ತಾರೆ. ಜನರಿಗೆ ಕನ್ನಡದ ಅವಶ್ಯಕತೆಯು ಕಾಣುವುದಿಲ್ಲ. ಮತ್ತು ಅಲ್ಲಿ ಕನ್ನಡದ ವಾತಾವರಣವೂ ಮೂಡುವುದಿಲ್ಲ.

ಕರ್ನಾಟಕ ರಾಜ್ಯ ನಿರ್ಮಾಣಗೊಂಡು ೪೦ ವರ್ಷಗಳೇ ಕಳೆದರೂ ಬೀದರ್ ಜಿಲ್ಲೆಯನ್ನು ಸಂಪೂರ್ಣವಾಗಿ ಕನ್ನಡೀಕರಣಗೊಳಿಸುವ ಪ್ರಯತ್ನ ಸಮರ್ಪಕ ರೀತಿಯಿಂದ ನಡೆದಿಲ್ಲ. ಕನ್ನಡದ ಬಗ್ಗೆ ಇನ್ನೂ ಒಂದು ರೀತಿಯ ಉದಾಸೀನ ಎಲ್ಲ ಕಡೆಗಳಲ್ಲಿಯೂ ಕಂಡು ಬರುತ್ತದೆ. ಬೀದರ್ ಜಿಲ್ಲೆಯಲ್ಲಿ ಜವಾನರು ಗುಮಾಸ್ತರು ಅವರನ್ನು ಮೊದಲುಗೊಂಡು ಮೇಲಿನ ಎಲ್ಲ ಅಧಿಕಾರಿಗಳೂ ಕನ್ನಡದ ಬಲವಾದ ದೀಕ್ಷೆಯನ್ನು ಪಡೆದವರೇ ಆಗಿರಬೇಕು. ಜನರಿಗೆ ಕೊಡುವ ಸರಕಾರದ ಎಲ್ಲ ನಮೂನೆಗಳೂ ಅತ್ಯಗತ್ಯವಾಗಿಯೂ ಕನ್ನಡದಲ್ಲಿಯೇ ಇರಬೇಕು.

ಜಿಲ್ಲಾ ಮುಖ್ಯಸ್ಥರೆಂದು ನೂತನವಾಗಿ ಬರುವ ಐಎಎಸ್ ಮತ್ತು ಐಪಿಎಸ್ ಗಳನ್ನು ಹಸಿಬಿಸಿಯಾಗಿ ಅಲ್ಲಿಗೆ ಕಳಿಸಿ ಕೊಡಬಾರದು. ಕೆಎಎಸ್ ದಿಂದ ಬಂದು ಕನ್ನಡದಲ್ಲಿ ಪಳಗಿ

ಐಎಎಸ್ ಆದವರನ್ನೇ ಅಲ್ಲಿಗೆ ಕಳಿಸಬೇಕು.

ಬೀದರ್ ಜಿಲ್ಲೆಯಲ್ಲಿ ಮರಾಠಿ ಮತ್ತು ಉರ್ದು ಇರುವಂತೆ ಕೊಡಗು ಜಿಲ್ಲೆಯಲ್ಲಿ ಮಲೆಯಾಳೀ ಇದೆ. ಅದು, ತೀರ ಇತ್ತೀಚೆಗೆ ಬಂದರೂ, ಬಹು ಬಲವಾಗಿ ಬೆಳೆದುಕೊಂಡಿದೆ. ಅದಕ್ಕೆ ೫೦–೬೦ ವರ್ಷಗಳ ಇತಿಹಾಸ ಮಾತ್ರ ಇದೆ.

ಕೊಡಗಿನ ಆಡಳಿತ ಸಮಗ್ರವಾಗಿ ಕನ್ನಡದಲ್ಲಿ ನಡೆಯಬೇಕು. ಸರಕಾರದೊಂದಿಗೆ ವ್ಯವಹರಿಸುವವರು ತಮಿಳರೇ ಆಗಿರಲಿ, ಮಳಿಯಾಳಿಗಳೇ ಆಗಿರಲಿ, ಅವರು ಅತ್ಯಗತ್ಯವಾಗಿಯೂ ಕನ್ನಡದಲ್ಲಿಯೇ ವ್ಯವಹರಿಸಬೇಕು. ಅಲ್ಲಿ ಕನ್ನಡ ಅಧಿಕಾರಿಗಳು ಇದ್ದರೆ ಮಾತ್ರ, ಈ ಕಾರ್ಯ ತನ್ನಷ್ಟಕ್ಕೆ ತಾನೇ ನಡೆಯುತ್ತದೆ. ಸರ್ಕಾರೀ ಅಧಿಕಾರಿಗಳು ಯಾರೊಂದಿಗೂ ಅಲ್ಲಿ ಕನ್ನಡವನ್ನು ಬಿಟ್ಟು ಬೇರೆ ಭಾಷೆಯಲ್ಲಿ ವ್ಯವಹರಿಸಬಾರದು.

ಬೆಳಗಾವಿ ಬೀದರ್, ಹಾಗೂ ಕೊಡಗುಗಳಲ್ಲಿ ಮರಾಠಿ, ಉರ್ದು ಹಾಗೂ ಮಲಯಾಳೀ ಪ್ರಶ್ನೆ ಮಾತ್ರ ಇರಬಹುದು. ಆದರೆ ಬೆಂಗಳೂರಿನಲ್ಲಿ ಇವೆಲ್ಲ ಭಾಷೆಗಳಲ್ಲದೆ, ಇಂಗ್ಲೀಷಿನ ಹಾವಳಿ ಬಹು ದೊಡ್ಡ ಪ್ರಮಾಣದಲ್ಲಿ ಇದೆ. ಇಂಗ್ಲೀಷಿನ ಮೂಲಕ ಕೆಲಸ ನಡೆಯುತ್ತದೆಯೆಂದಾಗ ಬೆಂಗಳೂರಿನಲ್ಲಿ ಯಾರೊಬ್ಬರಿಗೂ ಕನ್ನಡದ ಅವಶ್ಯಕತೆ ಕಾಣಿಸಿಕೊಳ್ಳಲಾರದು. ರಾಜಧಾನಿಯಲ್ಲಿ ಕನ್ನಡ ದುರ್ಬಲಗೊಂಡರೆ, ಅದು ರಾಜ್ಯದ ಇನ್ನಿತರ ಕಡೆಗಳಲ್ಲಿಯೂ ದುರ್ಬಲಗೊಳ್ಳುತ್ತದೆ. ಬೆಂಗಳೂರು ನಗರ ಜಿಲ್ಲಾ ಆಡಳಿತದಲ್ಲಿ ಹಾಗೂ ಅಲ್ಲಿಯ ಮಹಾನಗರ ಪಾಲಿಕೆಯ ಆಡಳಿತದಲ್ಲಿ ಅಧಿಕಾರಿಗಳೆಲ್ಲರೂ ಅವರು ಯಾರೇ ಆಗಿದ್ದರೂ, ರಾಜ್ಯದ ಭಾಷೆಯಾದ ಕನ್ನಡದಲ್ಲಿಯೇ ವ್ಯವಹರಿಸಬೇಕು. ಈ ಪ್ರಶ್ನೆಯನ್ನು ಗೌಣವಾಗಿ ಕಾಣದೆ, ಬಹು ಗಂಭೀರವಾಗಿ ಪರಿಗಣಿಸಬೇಕು. ಈಗ ಬೆಂಗಳೂರಿನ ಭಾಷಾ ಸ್ವರೂಪವೇ ಪಲ್ಲಟಗೊಂಡಿದೆ. ಬೆಂಗಳೂರಿಗೆ ಕನ್ನಡದ ದೀಕ್ಷೆಯನ್ನು ಕೊಡುವುದು ಅಗತ್ಯವಿದೆ. ಇದು ಉದಾಸೀನ ಮಾಡಿ ಬಿಡುವ ಮಾತಲ್ಲ. ಆ ನಗರದಲ್ಲಿಯ ಸಣ್ಣ ದೊಡ್ಡ ಅಧಿಕಾರಿಗಳೆಲ್ಲರೂ ತಮ್ಮ ಪ್ರತಿಯೊಂದು ವ್ಯವಹಾರದಲ್ಲಿಯೂ ಕನ್ನಡವನ್ನೇ ಬಳಸುವಂತೆ ನೋಡಿಕೊಳ್ಳಬೇಕು. ಇಂಥ ಜನರನ್ನೇ ಹುಡುಕಿ ಸರಕಾರ, ಅವರನ್ನು ಅಲ್ಲಿ ಕೆಲಸಕ್ಕೆ ಹಚ್ಚಬೇಕು. ಯಾವ ಭಾಷೆಯಾದರೂ ನಡೆಯುತ್ತದೆಯೆಂದು ಅಧಿಕಾರಿಗಳು ಸಡಿಲು ತೋರಿಸಿದರೆ, ಬೆಂಗಳೂರಿನಲ್ಲಿ ಕನ್ನಡದ ಕಟ್ಟಡವೇ ಕುಸಿದು ಬೀಳುತ್ತದೆ.

ಬೆಂಗಳೂರು, ಬಗೆ ಬಗೆಯ ಜನರಿಂದ ಕೂಡಿದ ಬಹು ಭಾಷಾ ನಗರವಾದರೂ ಕೂಡ ಅದರ ಮೇಲೆ ಕನ್ನಡದ ಮುದ್ರೆ ಇರುವಂತೆ ನಡೆದುಕೊಳ್ಳುವುದು ಅಗತ್ಯವಿದೆ. ಸರಕಾರಕ್ಕೆ ಕನ್ನಡ ಬೇಕು ಎನ್ನುವುದಾದರೆ, ಸರಕಾರಕ್ಕೆ ಬಲ ತಂದು ಕೊಡುವ ಜನರು ಬೇಕಾಗುತ್ತಾರೆ. ಕನ್ನಡ ಭಾಷೆಯ ಉಪಯೋಗದ ಬಗ್ಗೆ ರಿಯಾಯತಿ ತೋರಿಸುವ ಅಧಿಕಾರಿಗಳನ್ನು ಬೆಂಗಳೂರು ನಗರ ಜಿಲ್ಲೆಗೆ ಖಂಡಿತವಾಗಿಯೂ ಕಳಿಸಿ ಕೊಡಬಾರದು.

೭. ಬೆಂಗಳೂರಿನಲ್ಲಿ ಕನ್ನಡ ತರಬೇಕು

ಬೆಂಗಳೂರಿಗೆ ಅದು ಎಷ್ಟು ಬೆಳೆಯಬೇಕೆಂಬ ಬಗ್ಗೆ ಒಂದು ಮಿತಿಯನ್ನು ಗೊತ್ತು ಪಡಿಸಿ ಮಾಗಡಿ ಕೆಂಪೇಗೌಡರು ಅದಕ್ಕೆ ನಾಲ್ಕು ಕಡೆಗಳಲ್ಲಿ ಗೋಪುರ ಕಟ್ಟಿಸಿ, ಅದರ ಬೆಳವಣಿಗೆ ಅಷ್ಟೇ ಆಗಬೇಕೆಂದು ಅದರ ಎಲ್ಲೆಗಳನ್ನು ಗೊತ್ತು ಪಡಿಸಿದ್ದರು. ಆದರೆ, ಬೆಂಗಳೂರು ನಗರವು ಅದರ ಸಂಸ್ಥಾಪಕನು ಗೊತ್ತು ಪಡಿಸಿದ ಗೆರೆಗಳನ್ನೂ ಮೀರಿ ಬಹು ದೂರಕ್ಕೆ ಹಬ್ಬಿಕೊಂಡಿದೆ.

೧೯೫೬ರಲ್ಲಿ ನೂತನ ಕರ್ನಾಟಕ ರಾಜ್ಯ ನಿರ್ಮಾಣಗೊಂಡಾಗ ಅದರ ಜನಸಂಖ್ಯೆ ಐದು ಲಕ್ಷದ ಒಳಗೇ ಇದ್ದಿತು. ಈಗ ಅದು ೫೦ ಲಕ್ಷ ಮಿಕ್ಕಿ ಮುಂದೆ ಹೋಗಿದೆ.

ಆಗ ತಮಿಳರು, ತೆಲುಗರು ಹಾಗೂ ಮಳಿಯಾಳಿಗಳು ಇದ್ದರೂ ಕೂಡ ಕನ್ನಡಿಗರ ಸಂಖ್ಯೆ ಗಣನೀಯವಾಗಿದ್ದಿತು. ಆದರೆ, ಇತ್ತೀಚೆಗೆ ವರ್ಷಗಳು ಕಳೆದಂತೆಲ್ಲಾ ಅನ್ಯ ಭಾಷೆಗಳ ಪ್ರಾಬಲ್ಯ ಅದರಲ್ಲಿಯೂ ತಮಿಳು ಭಾಷೆಯ ಪ್ರಾಬಲ್ಯ ವಿಪರೀತವಾಗಿ ಬೆಳೆದುಕೊಂಡಿದೆ. ಈಗ ಅಲ್ಲಿ ತಮಿಳರ ಸಂಖ್ಯೆ ಗಣನೀಯವಾಗಿ ಬೆಳೆದು ಕನ್ನಡಿಗರ ಸಂಖ್ಯೆ ತುಂಬ ಗೌಣವೆನಿಸಿದೆ.

ಬೆಂಗಳೂರಿನಂಥ ದೊಡ್ಡ ನಗರಗಳಲ್ಲಿ ಭಾಷೆಗಳ ಮಿಶ್ರಣ ಇರುವುದು ಸ್ವಾಭಾವಿಕ. ಆದರೆ ಮದ್ರಾಸ್ ನಗರವು ತನ್ನ ತಮಿಳು ಸ್ವರೂಪವನ್ನು ಕಳೆದುಕೊಂಡಿಲ್ಲ. ಕಲಕತ್ತೆಯು ತನ್ನ ಬಂಗಾಳಿ ಸ್ವರೂಪವನ್ನು ಕಳೆದುಕೊಂಡಿಲ್ಲ. ಅದೇ ರೀತಿ, ಹೈದ್ರಾಬಾದ ತನ್ನ ತೆಲುಗು ಸ್ವರೂಪವನ್ನು ಕಳೆದುಕೊಳ್ಳದೆ ಹಾಗೆಯೇ ಉಳಿಸಿಕೊಂಡಿದೆ. ಅಲ್ಲಿ ಉರ್ದು ಇದ್ದರೂ ಕೂಡ ತೆಲುಗಿಗೆ ಮುಖಭಂಗವಾಗುವ ಸ್ಥಿತಿ ಬಂದಿಲ್ಲ. ಮುಖ ಭಂಗವಾಗುವ ಸ್ಥಿತಿ ಇದ್ದರೆ ಬೆಂಗಳೂರಿನಲ್ಲಿ ಅದೂ ಕನ್ನಡಕ್ಕೆ ಮಾತ್ರ ಇದೆ.

ಇದು ಹೀಗೇಕೆ? ಮದ್ರಾಸದಲ್ಲಿ ತಮಿಳು ಇಲ್ಲದೆ ನಡೆಯಲಾರದು. ಕಲ್ಕತ್ತೆಯಲ್ಲಿ ಬಂಗಾಲಿ ಇಲ್ಲದೆ ನಡೆಯಲಾರದು, ಹೈದ್ರಾಬಾದನಲ್ಲಿ ತೆಲುಗು ಇಲ್ಲದೆ ನಡೆಯಲಾರದು. ಇಂಥ ಅನಿವಾರ್ಯತೆ ಬೆಂಗಳೂರಿನಲ್ಲಿ ಕನ್ನಡದ ಬಗ್ಗೆ ಮಾತ್ರ ಇಲ್ಲ.

ಸರಕಾರವು ಕನ್ನಡವನ್ನು ತನ್ನ ರಾಜಧಾನಿ ಇರುವ ಸ್ಥಳದಲ್ಲಿಯೇ ಅಸಹಾಯಕ ಸ್ಥಿತಿಗೆ ತಂದು ನಿಲ್ಲಿಸಿದೆ. ಸರಕಾರದೊಂದಿಗೆ ಯಾರೇ ವ್ಯವಹರಿಸುವುದಾದರೆ ಅವರು ಕನ್ನಡದಲ್ಲಿಯೇ ವ್ಯವಹರಿಸಬೇಕೆನ್ನುವ ಅನಿವಾರ್ಯತೆಯನ್ನು ಸರಕಾರವು ಅಲ್ಲಿ ನಿರ್ಮಿಸಿಲ್ಲ. ಇಂಗ್ಲೀಷ, ತಮಿಳು ಹೀಗೆ ಯಾವ ಭಾಷೆಯಾದರೂ ಇದ್ದರೆ ನಡೆದುಕೊಂಡು ಹೋಗುತ್ತದೆ ಎನ್ನುವ ವಾತಾವರಣವನ್ನು ಸರಕಾರವು ಅಲ್ಲಿ ನಿರ್ಮಿಸಿದೆ.

ಬೆಂಗಳೂರನ್ನು ಮೇಗಾ ಸಿಟಿ, ಬೃಹತ್ ನಗರವನ್ನಾಗಿ ಮಾಡಬೇಕೆನ್ನುವ ಹುನ್ನಾರವನ್ನು ಸರಕಾರವು ಈಗ ತನ್ನ ತಲೆಯಲ್ಲಿ ಹಾಕಿಕೊಂಡಿದೆ. ಆ ರೀತಿ ಯೋಜನೆಗಳು, ಕ್ರಮಗಳು ಜರುಗತೊಡಗಿವೆ. ಮೊದಲೇ ಕನ್ನಡಿಗರ ಧ್ವನಿ ಆ ನಗರದಲ್ಲಿ ಕಡಿಮೆ ಇದೆ. ಅದು, ಇನ್ನು ಮೇಲೆ ಇನ್ನೂ ಹೆಚ್ಚು ಕಡಿಮೆ ಆಗುತ್ತದೆ. ಈಗ ಶೇಕಡಾ ೨೭ ರಷ್ಟು ಇರುವ ಕನ್ನಡಿಗರ ಸಂಖ್ಯೆ ಮುಂದೆ ಶೇಕಡಾ ೨೦ರ ಒಳಗೆ ಬಂದರೆ ಆಶ್ಚರ್ಯ ಪಡಬೇಕಾದುದೇನೂ ಇಲ್ಲ.

ಬೆಂಗಳೂರಿನಲ್ಲಿ ರಾಜ್ಯದ ಭಾಷೆ ಅಲ್ಲಿಯ ಪ್ರತಿಯೊಬ್ಬರಿಗೂ ಬರಬೇಕೆನ್ನುವ ವಿಚಾರದಲ್ಲಿ ಸರಕಾರವು ಸೂಕ್ತವಾದ ಪರಿಣಾಮಕಾರೀ ಕಾರ್ಯಕ್ರಮಗಳನ್ನು ಕೈಕೊಳ್ಳುವುದು ಅಗತ್ಯವಿದೆ.

ಕನ್ನಡದ ಬಗೆಗೆ ಸರಕಾರವು ಒತ್ತಾಯ ಪಡಿಸುವುದರಿಂದ, ಅದರ ಮೇಲೆ ಭಾಷಾಂಧತೆಯ ಆರೋಪ ಬರಲಾರದು. ಯಾಕೆಂದರೆ, ಕರ್ನಾಟಕವು ಎಲ್ಲಾ ಭಾಷೆಗಳ ಬಗೆಗೆ ಬಹು ಉದಾರ ನೀತಿಯನ್ನು ಅನುಸರಿಸಿಕೊಂಡು ಬಂದಿದೆ. ಬೇರೆ ಭಾಷೆಯನ್ನು ಕಲಿತರೆ, ತನ್ನ ಭಾಷೆ ಅಳಿಯಿತೆಂದು ತುಳಿದು ಹೋಯಿತೆಂದು ತಿಳಿದು ಕೊಳ್ಳುವ ಪ್ರಶ್ನೆ ಅಲ್ಲಿ ಯಾರೊಬ್ಬರಿಗೂ ಬರಲಾರದು. ಬೆಂಗಳೂರಿನಲ್ಲಿ ಬೇರೆ ಭಾಷೆಗಳನ್ನು ತಿಳಿಯುವ ಪ್ರಶ್ನೆ ಇಲ್ಲ. ಕನ್ನಡವನ್ನು ಮೇಲಕ್ಕೆತ್ತುವ ಪ್ರಶ್ನೆ ಮಾತ್ರ ಇದೆ. ಭಾರತದಲ್ಲಿ ಒಂದೊಂದು ಭಾಷೆ ನಡೆಯುವುದಕ್ಕೆ ಒಂದೊಂದು ರಾಜ್ಯ ಇದೆ. ಮಹಾರಾಷ್ಟ್ರದಲ್ಲಿ ಮರಾಠಿ, ತಮಿಳುನಾಡಿನಲ್ಲಿ ತಮಿಳು ಹಾಗೂ ಕೇರಳದಲ್ಲಿ ಮಲಯಾಳೀ ಇರುವಂತೆ ಕರ್ನಾಟಕದಲ್ಲಿ ಕನ್ನಡ ಇರಬೇಕು.

ಕರ್ನಾಟಕ ರಾಜ್ಯದಲ್ಲಿ ನೆಲೆಸಲು ಬಂದಿರುವವರು, ಅವರು ಭಾರತದವರೂ ಹೌದು, ಕರ್ನಾಟಕದವರೂ ಹೌದು. ಅವರು ಕರ್ನಾಟಕದೊಂದಿಗೆ ಭಾರತವನ್ನು ಓಡಿದುಕೊಳ್ಳಬೇಕಲ್ಲದೆ, ಕರ್ನಾಟಕವನ್ನು ಬಿಟ್ಟು ಭಾರತವನ್ನು ಓಡಿದುಕೊಳ್ಳಬಾರದು. ಕರ್ನಾಟಕವನ್ನು ಬಿಟ್ಟು ಅಲ್ಲ, ಕರ್ನಾಟಕವನ್ನು ಓಡಿದುಕೊಂಡು ಅವರು ಭಾರತವನ್ನು ಓಡಿದುಕೊಳ್ಳಬೇಕು.

ಭಾಷಾ ಅಲ್ಪ ಸಂಖ್ಯಾತರು ಯಾವ ರಾಜ್ಯದಲ್ಲಿ ಇದ್ದರೂ ಅವರು ತಮ್ಮ ಅಸ್ತಿತ್ವವನ್ನು ಕಾಯ್ದುಕೊಂಡು ತಾವಿರುವ ರಾಜ್ಯದ ಜನರೊಂದಿಗೆ, ಭಾಷೆಯೊಂದಿಗೆ ಬೆರೆತು ಹೋಗಬೇಕು. ಮುಂದೆ ಬರುವ ದಿನಗಳಲ್ಲಿ ಅವರು ಒಂದು ದಿನ ರಾಜ್ಯದವರೇ ಆಗಬೇಕು.

ಭಾಷೆಗಳ ತಳಹದಿಯ ಮೇಲೆ ನೂತನ ರಾಜ್ಯಗಳನ್ನು ನಿರ್ಮಿಸಿದಾಗ ರಾಜ್ಯ ಪುನರ್ ಘಟನಾ ಆಯೋಗದ ಉದ್ದೇಶವು, ರಾಜ್ಯದೊಳಗಿನ ಎಲ್ಲಾ ಭಾಷೆಗಳ ಜನರೂ ಕಾಲಾಂತರದಲ್ಲಿ, ತಮ್ಮ ಭಾಷೆಯೊಂದಿಗೆ ಬೆಳೆದರೂ ರಾಜ್ಯದ ಭಾಷೆಯೊಂದಿಗೆ ಬೆರೆತು ಹೋಗಬೇಕೆನ್ನುವುದೇ ಆಗಿದ್ದಿತು. ಈಗ ಭಾಷಾನ್ವಯ ರಾಜ್ಯಗಳು ನಿರ್ಮಾಣಗೊಂಡು ೪೦ ವರ್ಷಗಳೇ ಕಳೆದು ಹೋಗಿವೆ. ಒಂದು ಭಾಷೆಯೊಂದಿಗೆ ಬೆಳೆಯುವುದಕ್ಕೆ ಒಬ್ಬ ಮನುಷ್ಯನಿಗೆ ಎಷ್ಟು ಕಾಲಾವಕಾಶ ಬೇಕು? ಒಂದು ಪ್ರದೇಶದಲ್ಲಿ ನಾಲ್ಕಾರು ವರ್ಷಗಳವರೆಗೆ ಇದ್ದರೆ ಯಾರಾದರೂ ಅಲ್ಲಿಯ ಭಾಷೆಯ ಪ್ರವಾಹದಲ್ಲಿ ಬೆರೆತು ಹೋಗುತ್ತಾರೆ. ಹಾಗೆಂದ ಮೇಲೆ, ೪೦ ವರ್ಷಗಳಿಂದ ಅಷ್ಟೇ ಅಲ್ಲ, ಅದಕ್ಕಿಂತಲೂ ಹೆಚ್ಚು ಕಾಲದಿಂದ ಕರ್ನಾಟಕದಲ್ಲಿ ಇದ್ದವರು ಕನ್ನಡ ಕಲಿತಿಲ್ಲ, ಅವರಿಗೆ ಕನ್ನಡ ಬರುವುದಿಲ್ಲವೆಂದು ಹೇಳಿದರೆ ಅದಕ್ಕೆ ಅರ್ಥ ಇರಲಾರದು.

ಜಗತ್ತಿನ ಎಲ್ಲ ದೇಶಗಳೂ ತಮ್ಮ ದೇಶದ ಭಾಷೆಯಲ್ಲಿಯೇ ಸರಕಾರವನ್ನು ನಡೆಸುತ್ತವೆ. ಫ್ರಾನ್ಸಿನಲ್ಲಿ ಫ್ರೆಂಚ್ ಇದೆ. ಜರ್ಮನಿಯಲ್ಲಿ ಜರ್ಮನ್ ಇದೆ. ಜಪಾನದಲ್ಲಿ ಜಪಾನಿ ಇದೆ, ಅದರಂತೆ ಅರೆಬಿಯಾದಲ್ಲಿ ಅರಬ್ಬೀ ಇದೆ. ಪ್ರತಿಯೊಂದು ರಾಜ್ಯದಲ್ಲಿಯೂ ಅಲ್ಲಿಯ ಭಾಷೆಯೇ ಆಡಳಿತ ಭಾಷೆಯಾಗಿದೆ. ಮಹಾರಾಷ್ಟ್ರದಲ್ಲಿ ಮರಾಠಿ ಇದೆ. ಆಂಧ್ರದಲ್ಲಿ

ತೆಲುಗು ಇದೆ. ತಮಿಳುನಾಡಿನಲ್ಲಿ ತಮಿಳು ಇದೆ. ಅದರಂತೆ ಕರ್ನಾಟಕದಲ್ಲಿ ಕನ್ನಡ ಇರಬೇಕು.

ಆಡಳಿತದಲ್ಲಿ ರಾಜ್ಯದ ಭಾಷೆಯಾದ ಕನ್ನಡ ಇರಬೇಕೆಂದು ಹೇಳಿದರೆ, ಅದು ವ್ಯವಹಾರ ಗೊತ್ತಿದ್ದವರಿಗೆ ಅಪಥ್ಯವೆನಿಸುವುದೇ ಇಲ್ಲ. ಹಾಗೆಂದೇ ರಾಜ್ಯಕ್ಕೆ ಬಂದು, ರಾಜ್ಯದಲ್ಲಿ ನೆಲಸಿದವರು ರಾಜ್ಯದ ಜನರೊಂದಿಗೆ, ರಾಜ್ಯಡ ಭಾಷೆಯೊಂದಿಗೆ ಹೊಂದಿಕೆ ಮಾಡಿಕೊಂಡು ಹೋಗಬೇಕು.

ರಾಜ್ಯದಲ್ಲಿರುವ ಪ್ರತಿಯೊಬ್ಬರೂ, ಅವರ ಭಾಷೆ ಯಾವುದೇ ಆಗಿದ್ದರೂ ಅವರು, ಸರಕಾರದೊಂದಿಗೆ ರಾಜ್ಯದ ಭಾಷೆಯಲ್ಲಿಯೇ ವ್ಯವಹರಿಸಿಕೊಂಡು ಹೋಗಬೇಕಾಗುತ್ತದೆ. ಇದರಲ್ಲಿ ಯಾರ ಮೇಲೆಯೂ ಒತ್ತಾಯ ಹೇರುವ ಪ್ರಶ್ನೆಯೇ ಇಲ್ಲ. ರಾಜ್ಯದ ಭಾಷೆಯನ್ನು ಕಲಿಯುವುದು, ರಾಜ್ಯದ ಜನರೊಂದಿಗೆ ಬೆರೆಯುವದು ಅವರ ಕರ್ತವ್ಯವೇ ಆಗಿದೆ.

ಸರಕಾರವು ಆಡಳಿತದಲ್ಲಿ ಕನ್ನಡವನ್ನು ಅನುಷ್ಠಾನಗೊಳಿಸಿದರೆ, ಅನಾಯಾಸವಾಗಿ ಎರಡು ಕೆಲಸಗಳು ಆಗುತ್ತವೆ. ರಾಜ್ಯದೊಳಗೆ ಇರುವ ಭಾಷಾ ಅಲ್ಪ ಸಂಖ್ಯಾತರಿಗೆ ಕನ್ನಡವನ್ನು ಕಲಿಯುವುದು ಆಗ ಅನಿವಾರ್ಯವೆನಿಸುತ್ತದೆ. ಒಂದು ವೇಳೆ ಆ ಭಾಷಾ ಅಲ್ಪ ಸಂಖ್ಯಾಕರಿಗೆ ಕನ್ನಡದ ಕೊರತೆ ಇದ್ದರೆ, ಅವರು ತಮ್ಮ ಕೊರತೆಯನ್ನು ಕನ್ನಡ ಬಲ್ಲವರಿಂದ ತುಂಬಿಕೊಳ್ಳಬಹುದು. ಕೆಲಸ ಇಲ್ಲದೇ ಕುಳಿತುಕೊಂಡ ನಿರುದ್ಯೋಗಿ ಕನ್ನಡ ಪದವೀಧರರಿಗೆ ಅರ್ಜಿ ಬರೆಯುವ ಕೆಲಸವಾದರೂ ಸಿಕ್ಕಿದಂತಾಗುತ್ತದೆ.

ರಾಜ್ಯ ಸರಕಾರ ಜನರಿಗೆ ನೀಡುವ ಪಡಿತರ ಚೀಟಿ, ವಿದ್ಯುತ್ ಬಿಲ್ಲು, ನೀರಿನ ಬಿಲ್ಲು ಎಲ್ಲವೂ ಕನ್ನಡದಲ್ಲಿಇರುವಂತೆ ನೋಡಿಕೊಳ್ಳಬೇಕು. ಸರ್ಕಾರಕ್ಕೆ ಬರುವ ಅರ್ಜಿ, ಕೋರಿಕೆ ಮೊದಲಾದವು ಕನ್ನಡದಲ್ಲಿ ಇದ್ದರೇನೇ ವಿಲೇವಾರಿ ಶೀಘ್ರವಾಗಿ ಆಗುವುದೆನ್ನುವ ಮನವರಿಕೆ ಎಲ್ಲರಿಗೂ ಆಗಬೇಕು.

ನಿವೇಶನ ಇಲ್ಲದವರಿಗೆ ನಿವೇಶನ ನೀಡಬೇಕೆನ್ನುವ ಬಹು ಉದಾರ ನೀತಿಯನ್ನು ಕರ್ನಾಟಕ ಸರಕಾರವು ಕೈಕೊಂಡಿದೆ. ಮನೆ ಇಲ್ಲದವರು ಮನೆ ಪಡೆಯಬೇಕಾದರೆ, ನಿವೇಶನ ಇಲ್ಲದವರು ನಿವೇಶನ ಪಡೆಯಬೇಕಾದರೆ ಅವರಿಗೆ ಅತ್ಯಗತ್ಯವಾಗಿಯೂ ಕನ್ನಡ ಬರಲೇಬೇಕು. ಅವರು ರಾಜ್ಯದಲ್ಲಿ ಇದ್ದ ಬಗೆಗೆ ಹತ್ತು ವರ್ಷಗಳ ಪಡಿತರ ಚೀಟಿ ತಂದು ಕೊಡಬೇಕು. ಅಂದರೇನೇ ಅವರು ಸರಕಾರದಿಂದ ಪುರಸ್ಕಾರ ಸೌಲಭ್ಯ ಮೊದಲಾದವನ್ನು ಪಡೆಯಲು ಸಮರ್ಥರಾಗುತ್ತಾರೆ.

ರಾಜ್ಯದೊಳಗೆ ಇರುವ ಯಾರೊಬ್ಬರೊಂದಿಗೂ ಅಧಿಕಾರಿಗಳು ಕನ್ನಡವನ್ನು ಬಿಟ್ಟು ಬೇರೆ ಭಾಷೆಯಲ್ಲಿ ವ್ಯವಹರಿಸಬಾರದು. ನಗರದ ಉದ್ದಗಲಗಳಲ್ಲಿ ಯಾರೇ ಹಾಯ್ದು ಬಂದರೂ, ಅವರಿಗೆ ತಾವು ಕರ್ನಾಟಕ ನಗರದಲ್ಲಿಯೇ ಹಾಯ್ದು ಬಂದ ಅನುಭವ ಆಗಬೇಕು. ಆ ರೀತಿ ಅಂಗಡಿ ಕಛೇರಿಗಳ ಎಲ್ಲ ವಹಿವಾಟುಗಳ ನಾಮಫಲಕಗಳೂ ಕನ್ನಡದಲ್ಲಿಯೇ ಇರಬೇಕು.

ಈಗ ಬೆಂಗಳೂರು ಬೆಳೆದರೆ ಸಾಲದು. ಅದು ಕನ್ನಡವನ್ನು ಓಡಿದುಕೊಂಡೇ ಬೆಳೆಯಬೇಕು. ಕನ್ನಡವನ್ನು ಬಿಟ್ಟು ಬೆಳೆದರೆ. ಬೆಂಗಳೂರು ಆತ್ಮವಿಲ್ಲದ ದೇಹದಂತೆ ಆಗುತ್ತದೆ.

ಬೆಂಗಳೂರು ನಗರ ತನ್ನ ಸ್ವರೂಪವನ್ನು ಕಳೆದುಕೊಳ್ಳದೆ. ಉಳಿಸಿಕೊಳ್ಳಬೇಕು. ತಮಿಳು ಪ್ರಭಾವಕ್ಕೆ ಒಳಗಾಗಿ. ನಮ್ಮ ಹಲಸೂರು ಈಗ ಅಲಸೂರು ಆಗಿದೆ. ಸುಧಾರಣೆಯ ಹುಚ್ಚಿಗೆ ಬಿದ್ದು ನಮ್ಮ ಆನೆಪಾಳ್ಯ ಈಗ ಗಜೇಂದ್ರನಗರ ಆಗಿದೆ. ಇಂಥ ಹುಚ್ಚುಚ್ಚಾರ ಆಗಬಾರದು.

ಬೆಂಗಳೂರು ಬೆಳೆಯುವುದಕ್ಕೆ ನನ್ನ ಆಕ್ಷೇಪಣೆ ಇಲ್ಲ. ಆದರೆ ಅದು ಕನ್ನಡವನ್ನು ಇಟ್ಟುಕೊಂಡು ಬೆಳೆಯಬೇಕು. ಬೆಂಗಳೂರು ಕನ್ನಡವನ್ನು ಕಳೆದುಕೊಂಡರೆ ಅದರ ಪರಿಣಾಮ ರಾಜ್ಯದ ಬೇರೆ ಭಾಗಗಳ ಮೇಲೆಯೂ ಆಗುತ್ತದೆ.

****

೮. ಮಹಾಜನ ವರದಿ ಜಾರಿಗೆ ಬಂದೀತೆ?

ಕರ್ನಾಟಕ ಮಹಾರಾಷ್ಟ್ರ ಗಡಿ ವಿವಾದವನ್ನು ಅಂತಿಮವಾಗಿ ತೀರ್ಮಾನಿಸಲು ಮಹಾಜನ ಆಯೋಗವು ೧೯೬೬ ರಲ್ಲಿ ನೇಮಕಗೊಂಡಿತು. ಮುಂದಿನ ವರ್ಷ ಬಂದರೆ, ಆ ಮಾತು ನಡೆದು ೩೦ ವರ್ಷಗಳೇ ಕಳೆದು ಹೋಗುತ್ತವೆ. ಮಹಾಜನ ಆಯೋಗದ ವರದಿಯ ನಂತರವೂ ಗಡಿವಿವಾದ ಪ್ರಶ್ನೆ ವರ್ತುಲದಲ್ಲಿ ಸುತ್ತುತ್ತಲೇ ಇದೆ.

ಅಂದಿನಿಂದ ಇಲ್ಲಿಯವರೆಗೆ, ಓಂದಿನ ೩೦ ವರ್ಷಗಳಲ್ಲಿ ಕೃಷ್ಣಾ ನದಿಯಲ್ಲಿ ಬಹಳಷ್ಟು ನೀರು ಹರಿದಿದೆ. ಆ ವರದಿ ಬರುವವರೆಗೆ ಉಲ್ಲಾಸದಿಂದ ಹಾರಾಡಿದ ಮಹಾರಾಷ್ಟ್ರ, ಆ ವರದಿ ಬಂದ ಮೇಲೆ ಅದರ ಬಗ್ಗೆ ಉದಾಸೀನ ತಾಳಿ. ಆಗರ ವಿಮುಖ ಉಗ್ರವಾಗಿ ಅರ್ಭಟಿಸತೊಡಗಿದೆ. ಆ ವರದಿ ವಿಕ್ಷಿಪ್ತವಾಗಿದೆಯೆಂದು ಅದು ಆರೋಪಿಸಿದೆ.

ಕರ್ನಾಟಕ ಮಹಾರಾಷ್ಟ್ರಗಳ ವಿವಾದವನ್ನು ಅಂತ್ಯಗೊಳಿಸಲು ತಾನೇ ನೇಮಿಸಿದ ಆಯೋಗದ ವರದಿಯನ್ನು, ಭಾರತ ಸರ್ಕಾರ ತನ್ನ ಕೆಳಗೆ ಹಾಕಿ ಕುಳಿತುಕೊಂಡಿದೆ. ಸರ್ಕಾರ ನೇಮಿಸಿದ ಆಯೋಗಗಳ ವರದಿಗಳಿಗೆ. ಶಿಫಾರಸುಗಳಿಗೆ ಪಾವಿತ್ರ್ಯ ಇರಬೇಕು. ಆದರೆ, ಭಾರತ ಸರ್ಕಾರವು ಈ ವರದಿಯ ಬಗೆಗೆ ಏನನ್ನೂ ಮಾಡದೆ ಉಭಯ ರಾಜ್ಯಗಳು ಹೊಂದಾಣಿಕೆ ಮಾಡಿಕೊಂಡು ಬರಬೇಕೆಂದು ಹೇಳುತ್ತ ಕುಳಿತು ಬಿಟ್ಟಿದೆ.

ಕರ್ನಾಟಕವು ಮಹಾಜನ ವರದಿಯ ಶಿಫಾರಸುಗಳನ್ನು ಜಾರಿಗೆ ತರಬೇಕೆಂದು ಭಾರತ ಸರ್ಕಾರವನ್ನು ಒಂದೇ ಸವನೆ ಒತ್ತಾಯ ಪಡಿಸುತ್ತಲೇ ಇದೆ. ಮಹಾರಾಷ್ಟ್ರ ಸರ್ಕಾರವು ಮಾತ್ರ ೩೦ – ೪೦ ವರ್ಷಗಳಿಂದ, ಗಡಿ ಪ್ರಶ್ನೆ ಪರಿಹಾರಗೊಳ್ಳದೇ ಹಾಗೆಯೇ ಉಳಿದು, ನೆನೆಗುದಿಗೆ ಬಿದ್ದಿದೆಯೆಂದು ಹೇಳುತ್ತಲೇ ಇದೆ.

ಈ ಮಹಾಜನ ಆಯೋಗ ಸುಮ್ಮನೆ ಬರಲಿಲ್ಲ. ಮಹಾರಾಷ್ಟ್ರ ಸರ್ಕಾರವೇ ಬೇಡಿ ಬಯಸಿ, ಒತ್ತಾಯ ಪಡಿಸಿ, ಅದನ್ನು ಪಡೆದುಕೊಂಡಿತು. ಕರ್ನಾಟಕಕ್ಕೆ ಅದರ ಬಗ್ಗೆ ಉತ್ಸುಕತೆ ಏನೂ ಇರಲಿಲ್ಲ. ಮಹಾರಾಷ್ಟ್ರದ ಕಿರಿಕಿರಿ ಅಂತಿಮವಾಗಿ ಒಮ್ಮೆ ಕೊನೆಗೊಂಡರೆ ಸಾಕೆಂದು, ಕರ್ನಾಟಕವು ಏಕಸದಸ್ಯ ಆಯೋಗದ ರಚನೆಯನ್ನು ಮನಸ್ಸಿಲ್ಲದ ಮನಸ್ಸಿನಿಂದ ಒಪ್ಪಿಕೊಂಡಿತು. ಆ ಆಯೋಗ ನೇಮಕಗೊಂಡಾಗಲಂತಲೂ ಮಹಾರಾಷ್ಟ್ರವು ಹುಚ್ಚೆದ್ದು ಕುಣಿದಾಡಿತು. ಏಕಸದಸ್ಯ ಆಯೋಗವು ಏನು ಶಿಫಾರಸು ಮಾಡುವುದೋ ಅದು ಅಂತಿಮವೆಂದು ಭಾವಿಸಿ, ಎರಡು ರಾಜ್ಯಗಳೂ ಅದನ್ನು ಒಪ್ಪಬೇಕೆಂದು ಆ ಒಡಂಬಡಿಕೆ ಆಗಿದ್ದಿತು.

ಆದರೆ, ವರದಿ ಬಂದ ಮೇಲೆ ಮಹಾರಾಷ್ಟ್ರ, ಆ ವರದಿಯನ್ನೂ, ಅದನ್ನು ಕೊಟ್ಟ ಸರ್ವೋನ್ನತ ನ್ಯಾಯಾಲಯದ ಮಾಜಿ ಮುಖ್ಯ ನ್ಯಾಯಾಧೀಶರಾದ ನ್ಯಾಯಮೂರ್ತಿ ಮೆಹರ್‌ಚಂದ್ ಮಹಾಜನರನ್ನೂ ತನ್ನ ಬಾಯಿಗೆ ಬಂದಂತೆ ಹೀನಾಮಾನವಾಗಿ ಟೀಕಿಸಿತು. ಮಹಾರಾಷ್ಟ್ರಕ್ಕೆ ಬೆಳಗಾವಿ ಬೇಕಾಗಿದ್ದಿತು. ಆದರೆ, ಮಹಾಜನ ವರದಿಯು ಅದನ್ನು ಮಹಾರಾಷ್ಟ್ರಕ್ಕೆ ನೀಡಿರಲಿಲ್ಲ. ಮಹಾರಾಷ್ಟ್ರೀಯರಲ್ಲಿ ವಿಚಿತ್ರ ತರ್ಕ ಕೆಲಸ ಮಾಡುವಂತೆ ತೋರುತ್ತದೆ. ನ್ಯಾಯಾಲಯಕ್ಕೆ ಹೋದ ಅವರು, ನ್ಯಾಯ ನಿರ್ಣಯ ತಮ್ಮ ಪರವಾಗಿ ಬಂದರೇನೇ ಅದನ್ನು ಸ್ವೀಕರಿಸುವವರೆಂಬಂತೆ ತೋರುತ್ತದೆ. ಇಲ್ಲದಿದ್ದರೆ, ಅವರು ನ್ಯಾಯಾಲಯವನ್ನು ಕೂಡ ಧಿಃಕ್ಕರಿಸುತ್ತಾರೆ.

ಏಕಸದಸ್ಯ ಆಯೋಗವು, ಕರ್ನಾಟಕ ಮಹಾರಾಷ್ಟ್ರ ಹಾಗೂ ಕರ್ನಾಟಕ ಕೇರಳಗಳ ಗಡಿ ವಿವಾದವನ್ನು ಕೊನೆಗೊಳಿಸಲು ಪರಿಹಾರ ಒಪ್ಪಿಸಬೇಕೆನ್ನುವ ಉದ್ದೇಶದಿಂದ ನೇಮಕಗೊಂಡಿತು. ಮಹಾರಾಷ್ಟ್ರದವರು ಕರ್ನಾಟಕದ ೨೮೦ ಹಳ್ಳಿ ಪಟ್ಟಣಗಳ ಮೇಲೆ ತಮ್ಮ ಹಕ್ಕುದಾರಿಕೆ ಮುಂದೆ ಮಾಡಿದ್ದರು. ಇದೇ ರೀತಿ ಕರ್ನಾಟಕದವರು ಹೆಚ್ಚು ಕಡಿಮೆ ಅಷ್ಟೇ ಹಳ್ಳಿ ಪಟ್ಟಣಗಳು ಮಹಾರಾಷ್ಟ್ರದಿಂದ ಬರಬೇಕೆಂದು ಕೇಳಿದರು. ಅದೇ ರೀತಿ ಮಹಾಜನರು, ಕರ್ನಾಟಕದ ೨೬೦ ಹಳ್ಳಿ ಪಟ್ಟಣಗಳು ಮಹಾರಾಷ್ಟ್ರಕ್ಕೆ ಹೋಗಬೇಕೆಂದೂ, ಮಹಾರಾಷ್ಟ್ರದ ೨೪೭ ಹಳ್ಳಿ ಪಟ್ಟಣಗಳು ಕರ್ನಾಟಕಕ್ಕೆ ಬರಬೇಕೆಂದೂ ತಮ್ಮ ವರದಿಯಲ್ಲಿ ಕಾಣಿಸಿದರು.

ಕರ್ನಾಟಕಕ್ಕೆ ಬರಬೇಕಾದ ಹಳ್ಳಿ ಪಟ್ಟಣಗಳಲ್ಲಿ ಹೆಚ್ಚಿನವು ಸೊಲ್ಲಾಪುರ ಜಿಲ್ಲೆಯ ಅಕ್ಕಲಕೋಟೆ ತಾಲ್ಲೂಕಿಗೆ ಸೇರಿದ್ದವು. ೬೫ ಹಳ್ಳಿಗಳು ದಕ್ಷಿಣ ಸೊಲ್ಲಾಪುರ ತಾಲ್ಲೂಕಿಗೆ ಸೇರಿದ್ದವು. ೪೫ ಹಳ್ಳಿ ಪಟ್ಟಣಗಳು ಸಾಂಗ್ಲಿ ಜಿಲ್ಲೆಯ ಜತ್ತ ತಾಲೂಕಿಗೆ ಸೇರಿದ್ದವು. ಸೊಲ್ಲಾಪುರ ಜಿಲ್ಲೆಯ ೯ ಹಳ್ಳಿಗಳು ಮಂಗಳವೆಢೆ ತಾಲ್ಲೂಕಿಗೆ ಸೇರಿದ್ದವು. ಮಿಕ್ಕುಳಿದ ೧೪ ಹಳ್ಳಿಗಳು ಕೊಲ್ಹಾಪುರ ಜಿಲ್ಲೆಯ ಹಾತಕಣಗಿಲೆ ಹಾಗೂ ಶಿರೋಳಗಳಿಗೆ ಸೇರಿದ್ದವು.

ಕರ್ನಾಟಕದಿಂದ ಮಹಾರಾಷ್ಟ್ರಕ್ಕೆ ಹೋಗಬೇಕಾದ ಹಳ್ಳಿಗಳು, ಹೆಚ್ಚಿನವು ಖಾನಾಪುರ ತಾಲ್ಲೂಕಿಗೆ ಸೇರಿದ್ದವು. ಮಿಕ್ಕುಳಿದವುಗಳು ಬೆಳಗಾವಿ, ಹುಕ್ಕೇರಿ ಹಾಗೂ ಚಿಕ್ಕೋಡಿ ತಾಲ್ಲೂಕುಗಳಿಗೆ ಸೇರಿದ್ದವು.

ಮಹಾಜನ ವರದಿಯಲ್ಲಿ ಕೇರಳದ ಕಣ್ಣಾನೂರು ಜಿಲ್ಲೆಯ ಕಾಸರಗೋಡು ತಾಲ್ಲೂಕು ಸಂಪೂರ್ಣವಾಗಿ ಕರ್ನಾಟಕಕ್ಕೆ ಸೇರಬೇಕೆಂದು ಶಿಫಾರಸು ಮಾಡಲಾಗಿದ್ದಿತು.

ತಾನೇ ನೇಮಕ ಮಾಡಿದ ಈ ಮಹಾಜನ ಆಯೋಗದ ವರದಿಯ ಬಗ್ಗೆ ಭಾರತ ಸರ್ಕಾರವು ಏನನ್ನೂ ಮಾಡದೆ, ಮಿಟ್ಟಿ ಮಿಸುಕದ ಬೆನಕಪ್ಪನಂತೆ ಸುಮ್ಮನೆ ಕೈಕಟ್ಟಿಕೊಂಡು ಕುಳಿತು ಬಿಟ್ಟಿದೆ.

ಮಹಾರಾಷ್ಟ್ರದ ರಾಜಕೀಯ ಪಕ್ಷಗಳು, ಅದರಲ್ಲಿ ಆಳುವ ಪಕ್ಷವೂ ಸೇರಿದೆ. ಮಹಾಜನ ವರದಿಯು ಕರ್ನಾಟಕಕ್ಕೆ ಹೋಗಬೇಕೆಂದು ಶಿಫಾರಸು ಮಾಡಿರುವ ಹಳ್ಳಿ ಪಟ್ಟಣಗಳಲ್ಲಿ ರಭಸದ ಆಂದೋಲನವನ್ನು ಕೈಕೊಂಡಿವೆ. ಅಲ್ಲಿಯ ಜನರಿಂದ ಹಾಗೂ ಪಂಚಾಯತಿಗಳಿಂದ, ತಾವು ಮಹಾರಾಷ್ಟ್ರದಲ್ಲಿ ಸುಖದಿಂದ ಇರುವುದಾಗಿಯೂ, ತಾವು ಕರ್ನಾಟಕಕ್ಕೆ ಹೋಗಲು ಸಿದ್ಧರಿಲ್ಲವೆಂದೂ ತಮ್ಮನ್ನು ಮಹಾರಾಷ್ಟ್ರದಲ್ಲಿಯೇ ಇರಿಸಬೇಕೆಂದೂ ಹೇಳುವ ನಿರ್ಣಯಗಳು ಬರುವಂತೆ ಅವರನ್ನು ಒತ್ತಾಯಕ್ಕೆ ಗುರಿ ಪಡಿಸಲಾಗಿದೆ.

ಕರ್ನಾಟಕವು ಈ ಅನಾರೋಗ್ಯಕರ ಬೆಳವಣಿಗೆಯನ್ನು ಬಹು ಗಂಭೀರವಾಗಿ ಪರಿಗಣಿಸಬೇಕು. ಮಹಾಜನ ವರದಿ ಜಾರಿಗೆ ಬರಬೇಕೆಂದು ಕರ್ನಾಟಕವು ಒತ್ತಾಯ ಪಡಿಸುತ್ತಿರುವುದು ಸರ್ವವಿದಿತ ಸಂಗತಿ. ಕರ್ನಾಟಕದ ಒತ್ತಾಯದ ಮೇರೆಗೆ, ಕೆಲ ವರ್ಷಗಳ ನಂತರ, ಮಹಾಜನ ಆಯೋಗದ ವರದಿ ಜಾರಿಗೆ ಬರಬೇಕೆನ್ನುವುದಾದರೆ ಕರ್ನಾಟಕದಿಂದ ಮಹಾರಾಷ್ಟ್ರಕ್ಕೆ ಹೋಗಬೇಕಾದ ಭಾಗಗಳು ಮಹಾರಾಷ್ಟ್ರಕ್ಕೆ ಹೋಗುತ್ತವೆ. ಆದರೆ, ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಬರಬೇಕಾದ ಭಾಗಗಳು ಮಾತ್ರ ಕರ್ನಾಟಕಕ್ಕೆ ಬರುವುದಿಲ್ಲ.

ಮಹಾಜನ ವರದಿ ಕೇವಲ ಕರ್ನಾಟಕ ಮಹಾರಾಷ್ಟ್ರಗಳಿಗೆ ಮಾತ್ರ ಸೀಮಿತವಾಗಿಲ್ಲ. ಕರ್ನಾಟಕದ ಬಹುತೇಕ ಜನರು ಆ ರೀತಿ ಭಾವಿಸಿದ್ದಾರೆ. ಕಾಸರಗೋಡಿನ ಪ್ರಶ್ನೆಯೂ ಅದರಲ್ಲಿ ಇದೆ ಎನ್ನುವುದನ್ನು ಅವರು ಪರಿಗಣಿಸಿದಂತೆ ಇಲ್ಲ. ರಾಜ್ಯ ಪುನರ್ ಘಟನಾ ಆಯೋಗವು, ಪ್ರದೇಶಗಳ ವಿಂಗಡಣೆಯಲ್ಲಿ ತಾಲೂಕನ್ನು ಒಂದು ಘಟಕವನ್ನಾಗಿ ಹಿಡಿದಿದೆ. ೧೦೦ಕ್ಕೆ ೭೦ಕ್ಕಿಂತಲೂ ಮೇಲ್ಪಟ್ಟು ಜನ ಯಾವ ಭಾಷೆಯನ್ನು ಆಡುವರೋ ಆ ತಾಲೂಕು ಆ ಭಾಷಾ ವರ್ಗದ ರಾಜ್ಯಕ್ಕೆ ಸೇರಬೇಕೆಂದು ಗೊತ್ತಾಗಿದ್ದಿತು. ೧೦೦ಕ್ಕೆ ೭೦ಕ್ಕಿಂತಲೂ ಹೆಚ್ಚು ಜನ ಮರಾಠೀ ಮಾತನಾಡುತ್ತಿದ್ದರೆಂದು ಚಂದಗಡ ತಾಲ್ಲೂಕು ಬೆಳಗಾವಿ ಜಿಲ್ಲೆಯಿಂದ ಮಹಾರಾಷ್ಟ್ರದ ಕೊಲ್ಲಾಪುರಕ್ಕೆ ಹೋಯಿತು. ಆದರೆ, ೧೦೦ಕ್ಕೆ ೭೦ಕ್ಕಿಂತ ಹೆಚ್ಚು ಜನ ಕನ್ನಡಿಗರಿದ್ದ ಕಾಸರಗೋಡು ತಾಲ್ಲೂಕು ಮಾತ್ರ ಕರ್ನಾಟಕಕ್ಕೆ ಬರಲಿಲ್ಲ. ಇದು ಆಗ ಉದ್ದೇಶ ಪೂರ್ವಕವಾಗಿ ಕರ್ನಾಟಕಕ್ಕೆ ಆದ ಅನ್ಯಾಯ. ಹಿಂದೆ ಆಗಿದ್ದ ಈ ಅನ್ಯಾಯವನ್ನು ಮಹಾಜನ ಆಯೋಗವು ತನ್ನ ವರದಿಯಲ್ಲಿ ಸರಿಪಡಿಸಿ, ಕಾಸರಗೋಡು ತಾಲ್ಲೂಕು ಕರ್ನಾಟಕಕ್ಕೆ ಹೋಗಬೇಕೆಂದು ಶಿಫಾರಸು ಮಾಡಿದ್ದಿತು.

ಕಾಸರಗೋಡಿನಲ್ಲಿ ಬಹು ಭದ್ರವಾದ ಕನ್ನಡದ ನೆಲೆಗಟ್ಟು ಇದೆ. ಅದು ಕರ್ನಾಟಕಕ್ಕೆ ಬರಬೇಕೆನ್ನುವುದರಲ್ಲಿ ಅನುಚಿತವಾದುದೇನೂ ಇಲ್ಲ. ಆದರೆ, ಕರ್ನಾಟಕ ಸರ್ಕಾರಕ್ಕೆ

ಕಾಸರಗೋಡಿನ ಬಗೆಗೆ ಆಸಕ್ತಿಯ ಭಾವನೆ ಯಾವುದೂ ಇದ್ದಂತೆ ಇಲ್ಲ. ಅದರ ಬಗ್ಗೆ ಮುಖ್ಯಮಂತ್ರಿಗಳನ್ನು ಕೇಳಿದರೆ, ಅವರು ವಾದಗ್ರಸ್ತ ವಿಷಯದಲ್ಲಿ ತಮ್ಮನ್ನು ಎಳೆದು ತರಬಾರದೆಂದು ಹೇಳುತ್ತಾರೆ. ಕಾಸರಗೋಡು ಕೇರಳದವರ ದೃಷ್ಟಿಯಿಂದ ವಾದಗ್ರಸ್ತವೆನಿಸಬಹುದಲ್ಲದೆ ಕರ್ನಾಟಕದ ದೃಷ್ಟಿಯಿಂದ ವಾದಗ್ರಸ್ತವೆನಿಸಬಾರದು. ಕರ್ನಾಟಕದ ಮುಖ್ಯಮಂತ್ರಿಗಳ ಈ ಹೇಳಿಕೆ, ಕಾಸರಗೋಡಿನ ಕನ್ನಡ ಜನರು ಕೈಕಾಲು ಕಳೆದುಕೊಳ್ಳುವಂತೆ ಮಾಡಿದೆ. ಕರ್ನಾಟಕ ಪ್ರದೇಶದ ಹಿತ ಸಂಬಂಧಗಳನ್ನು ಕಾಯ್ದುಕೊಳ್ಳಬೇಕಾದ ಕರ್ನಾಟಕದ ಮುಖ್ಯಮಂತ್ರಿಗಳು ಕಾಸರಗೋಡಿನ ಬಗ್ಗೆ ಕೇರಳದ ಮುಖ್ಯಮಂತ್ರಿಯಂತೆ ಮಾತನಾಡಿರುವದು ಸಮರ್ಥನೀಯವೂ ಅಲ್ಲ, ಕ್ಷಮ್ಯವೂ ಅಲ್ಲ.

ಇಂಥ ತಪ್ಪು ತಡೆಗಳನ್ನು, ಕರ್ನಾಟಕ ಜನರು, ವಿಶೇಷವಾಗಿ ಮೈಸೂರಿನವರು, ಮಾಡಿಕೊಂಡು ಬಂದರೆಂದೇ ಕರ್ನಾಟಕಕ್ಕೆ ಬರಬೇಕಾದ ಬಹಳಷ್ಟು ಭಾಗಗಳು ಕನ್ನಡಿಗರ ಕೈತಪ್ಪಿವೆ. ಕವಿ ಬೇಂದ್ರೆಯವರು ಹೇಳಿದಂತೆ ಕರ್ನಾಟಕದ ಜನರಲ್ಲಿ ತಮ್ಮತನದ ಅರಿವು ಇಲ್ಲ. ಕರ್ನಾಟಕದ ಸಮಗ್ರತೆಯನ್ನು ಹಾಗೂ ಭದ್ರತೆಯನ್ನು ಕಾಯ್ದುಕೊಳ್ಳಲು ಸರ್ವ ಪ್ರಯತ್ನಗಳೂ ಕನ್ನಡಿಗರಲ್ಲಿ ಸದಾ ಇರಬೇಕು.

ಕರ್ನಾಟಕವು ಮುಂದೆ ಬರಬೇಕೆನ್ನುವ ಜಿಜ್ಞಾಸೆ ಪ್ರತಿಯೊಬ್ಬ ಕನ್ನಡಿಗನಲ್ಲೂ ಇರಬೇಕು, ಬರಬೇಕು. ಸರ್ಕಾರವು ಈ ವಿಚಾರವನ್ನು ಕುರಿತು ಎಲ್ಲಕ್ಕೂ ಮೊದಲು ರಾಜ್ಯದ ಪ್ರಾತಿನಿಧಿಕ ಜನರ ಒಂದು ಚಕ್ರಗೋಷ್ಠಿಯನ್ನು ಕರೆಯಬೇಕು.

ಹಗ್ಗ ಹರಿಯಲ್ಲ, ಕೋಲು ಮುರಿಯಲಿಲ್ಲ ಎಂಬಂತೆ, ಕನ್ನಡ ಕರ್ನಾಟಕಗಳ ಪ್ರಶ್ನೆ, ಡೆಮೋಕ್ಲೆಸ್‌ನ ಖಡ್ಗದಂತೆ ಕನ್ನಡಿಗರ ತಲೆಯ ಮೇಲೆ ಸದಾ ತೂಗುತ್ತಲೇ ಇರಬಾರದು. ನೆಮ್ಮದಿ ಹಾಗೂ ನಿಶ್ಚಿಂತತೆಯಿಂದ ಬದುಕುವ ಭರವಸೆ ಕನ್ನಡಿಗರಿಗೆ ದೊರೆಯಬೇಕು. ಈ ಗಡಿ ವಿವಾದವನ್ನು ಜೀವಂತವಾಗಿ ಇರಿಸದೆ ಅದಕ್ಕೆ ಕೇಂದ್ರ ಸರ್ಕಾರ ಕೊನೆಯ ತೆರೆಯನ್ನು ಎಳೆಯಬೇಕು. ದೇಶದಲ್ಲಿ ಮಾಡುವುದಕ್ಕೆ ಬೇಕಾದಷ್ಟು ಕೆಲಸ ಇವೆ. ಜನರ ಗಮನವು ಅತ್ತ ಕಡೆಗೆ ಹರಿಯಬೇಕು. ಗಡಿ ವಿವಾದವನ್ನು ಮಹಾಜನ ವರದಿಯೊಂದಿಗೆ ಕೊನೆಗೊಳಿಸಬೇಕು.